
ಕರ್ನಾಟಕ ನಾಟಕ ಅಕಾಡೆಮಿ

# ಚಿತ್ರದುರ್ಗ

## ಜಿಲ್ಲಾ ರಂಗಮಾಹಿತಿ

ಡಿ. ಶ್ರೀಕುಮಾರ್



ಜಿಲ್ಲಾ ರಂಗಮಾಹಿತಿ ಮಾಲಿಕೆ

# ಚಿತ್ರದುರ್ಗ

## ಜಿಲ್ಲಾ ರಂಗ ಮಾಹಿತಿ

ಡಿ. ಶ್ರೀಕುಮಾರ್

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨
ದೂರವಾಣಿ : ೦೮೦ – ೨೨೨೩ ೭೪೮೪

**Chitradurga Jilla Ranga Mahiti**
District Theatre information written by
**D. Srikumar**
Published by **B. Manjunatha Aradhya**, Registrar,
Karnataka Nataka Academy, Kannada Bhavana,
J.C. Road, Bengaluru-560002 Phone : 080-22237484

| | | |
|---|---|---|
| ಹಕ್ಕುಗಳು | : | ಕರ್ನಾಟಕ ನಾಟಕ ಅಕಾಡೆಮಿ |
| ಮೊದಲ ಮುದ್ರಣ | : | ೨೦೧೭ |
| ಪ್ರತಿಗಳು | : | ೧,೦೦೦ |
| ಪುಟಗಳು | : | xii + ೭೨ |
| ಬೆಲೆ | : | ರೂ. ೬೦/- |

**ಪ್ರಕಾಶಕರು**
ಬಿ. ಮಂಜುನಾಥ ಆರಾಧ್ಯ, ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦೦೦೨
ದೂರವಾಣಿ : ೦೮೦ - ೨೨೨೩೭೪೮೪

ಮುಖಪುಟ ವಿನ್ಯಾಸ :
**ಕೃಷ್ಣ ರಾಯಚೂರು**

ಮುದ್ರಣ :
ವಿ.ವಿ. ಪ್ರಿಂಟರ್ಸ್
ಚಾಮರಾಜಪೇಟೆ, ಬೆಂಗಳೂರು-೧೮
ಮೊ. : ೯೩೪೧೯ ೯೭೯೯೮

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿ ಮೂರು ವರ್ಷದ ನಮ್ಮ ಅವಧಿಯ ಮುಕ್ತಾಯದ ಹಂತಕ್ಕೆ ಬಂದಿದ್ದೇವೆ. ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಬಾಗಲಕೋಟೆ ಜಿಲ್ಲೆ ಇಳಕಲ್‌ನಲ್ಲಿ 30 ದಿನಗಳ ವೃತ್ತಿರಂಗಭೂಮಿ ತರಬೇತಿ ಶಿಬಿರ, ಮುಂಬಯಿ, ದೆಹಲಿ ಹಾಗೂ ಕೇರಳದ ತ್ರಿಶೂರಿನಲ್ಲಿ ಹೊರರಾಜ್ಯ ನಾಟಕೋತ್ಸವ, ಕಾಸರಗೋಡಿನಲ್ಲಿ ಗಡಿನಾಡು ಬಹುಭಾಷಾ ನಾಟಕೋತ್ಸವ ಮತ್ತು ಮೈಂದರ್ಗಿಯಲ್ಲಿ ಗಡಿನಾಡ ನಾಟಕೋತ್ಸವ ಬನಹಟ್ಟಿಯಲ್ಲಿ ಮಹಿಳಾ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮಗಳನ್ನು ಕಳೆದ ಮೂರು ವರ್ಷಕಾಲ ಹಮ್ಮಿಕೊಂಡಿದ್ದೆವು.

ವಿಜಯಪುರದಲ್ಲಿ 2015 ಸೆ.24 ರಿಂದ 30 ರ ವರೆಗೆ ನಡೆದರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ. ಆಲ್ದಾಳ ಅವರಿಗೆ ಕಲಬುರಗಿಯಲ್ಲಿ, ಹಿರಿಯ ನಟ ಕಂಚಿಕೇರಿ ಶಿವಣ್ಣ ಅವರಿಗೆ ದಾವಣಗೆರೆಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ 21 ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಹಾಗೂ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಏಳು ದಿನಗಳ ಕಾಲ ನಡೆದ ವೃತ್ತಿರಂಗಭೂಮಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕಯೋಜನೆಯಡಿ 30 ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ಏರ್ಪಡಿಸಿದ್ದೇವೆ. ವಿಶೇಷ ಘಟಕ ಯೋಜನೆಯಡಿ ಐದು ಕಲಾವಿದರ ಮತ್ತು ಗಿರಿಜನ ಯೋಜನೆಯಲ್ಲಿ

ಇಬ್ಬರು ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ ಮಾಡಲಾಗಿದೆ. 12 ವೃತ್ತಿ ನಾಟಕ ಕಂಪನಿಗಳ ಸಾಕ್ಷ್ಯಚಿತ್ರ ನಿರ್ಮಿಸಲಾಗುತ್ತಿದೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಸರಿಸುಮಾರು 20 ವರ್ಷಗಳಿಂದ ಸ್ಥಗಿತಗೊಂಡಿದ್ದ ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ. ನಾಟಕ ರಚನಾ ಶಿಬಿರದಲ್ಲಿ ಆಯ್ಕೆಯಾದ ಏಳು ನಾಟಕಗಳ ಸಂಕಲನವನ್ನು ಹೊರತರಲಾಗುವುದು.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪ್ರಥಮ ಹಂತದಲ್ಲಿ ಜಿಲ್ಲಾ ರಂಗಮಾಹಿತಿ ಮಾಲಿಕೆ ಮತ್ತು ರಂಗಸಂಪನ್ನರು ಮಾಲಿಕೆಯ 18 ಪುಸ್ತಕಗಳು ಬಿಡುಗಡೆಯಾಗಿವೆ. ಎರಡನೇ ಹಂತದಲ್ಲಿ 15 ಪುಸ್ತಕಗಳು ಬಿಡುಗಡೆಯಾಗುತ್ತಿವೆ. ಶತಮಾನದ ಶಕಪುರುಷ ಏಣಗಿ ಬಾಳಪ್ಪ, ರಂಗಭೂಮಿ ಮತ್ತು ಮಹಿಳೆ ಪುಸ್ತಕಗಳನ್ನು ಹೊರತರಲಾಗಿದೆ. ಧಾರವಾಡದಲ್ಲಿ ಫೆಬ್ರವರಿ 19 ರಿಂದ 23ರವರೆಗೆ ರಾಜ್ಯಮಟ್ಟದ ಹವ್ಯಾಸಿ ರಂಗೋತ್ಸವ ನಡೆಸಲಾಗಿದೆ.

1959 ರಿಂದ 2016 ರ ವರೆಗಿನ ನಾಟಕ ಅಕಾಡೆಮಿಯ ಎಲ್ಲಾ ಪ್ರಶಸ್ತಿ ಪುರಸ್ಕೃತರ ಪರಿಚಯದ ಪುಸ್ತಕವನ್ನು ಹೊರತರಲು ಕ್ರಮ ವಹಿಸಲಾಗುತ್ತಿದೆ. ಈ ಎಲ್ಲಾ ಕನಸು ಸಾಕಾರಗೊಳ್ಳಲು ಶ್ರಮಿಸಿದ ಪ್ರಕಟಣಾ ಸಮಿತಿ ಸದಸ್ಯರು / ನಾಟಕ ಅಕಾಡೆಮಿ ಸದಸ್ಯರು ಹಾಗೂ ಜಿಲ್ಲಾ ರಂಗಮಾಹಿತಿ ಮಾಲಿಕೆಯಡಿ ಸರಿಸುಮಾರು 25 ಮತ್ತು ರಂಗಸಂಪನ್ನರು ಮಾಲಿಕೆಯಡಿ 15 ಕಲಾವಿದರ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲಾ ಲೇಖಕರಿಗೆ, ಪುಸ್ತಕವನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ವಿ.ವಿ. ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಗಣೇಶ್‌ರವರಿಗೂ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ. ಮಂಜುನಾಥ ಆರಾಧ್ಯ ಹಾಗೂ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳು.

– ಎಲ್.ಬಿ. ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ಇದು ಆರಂಭ

ಒಂದೊಂದು ಜಿಲ್ಲೆಗಳ ರಂಗಮಾಹಿತಿ ಪ್ರತ್ಯೇಕವಾಗಿ ಪುಸ್ತಕ ರೂಪದಲ್ಲಿ ಲಭ್ಯವಿರಬೇಕು ಎನ್ನುವುದು ನಾಟಕ ಅಕಾಡೆಮಿಯ ಬಹುದಿನದ ಕನಸು. ಇದು ಗುರುತರ ಕೆಲಸ. ಬಿ.ವಿ. ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಇದಕ್ಕೆ ಚಾಲನೆ ನೀಡಲಾಯಿತು. ಅಕಾಡೆಮಿ ಸದಸ್ಯರಿಗೆ ಇದರ ಹೊಣೆ ಹೊರಿಸಿ ಜಿಲ್ಲೆಯ ಮಟ್ಟದಲ್ಲಿ ಮಾಹಿತಿ ಸಂಗ್ರಹಿಸುವ ಹತ್ತಾರು ರಂಗಕರ್ಮಿಗಳ ಸಂಪಾದಕೀಯ ಸಮಿತಿ ರಚಿಸಲಾಯಿತು. ಹಾಗೂ ಹೀಗೂ 5–6 ಜಿಲ್ಲೆಗಳ ರಂಗಮಾಹಿತಿಯೂ ಸಿದ್ಧಗೊಂಡಿತು. ಆದರೆ ಪುಸ್ತಕಗಳು ಹೊರಬರಲಿಲ್ಲ. ಜಿಲ್ಲೆಯ ಮಟ್ಟದಲ್ಲಿ ಹೆಚ್ಚಿನ ಜನರನ್ನು ಈ ಕೆಲಸಕ್ಕಾಗಿ ತೊಡಗಿಸುವುದು ಕಷ್ಟಕರ. ನಮ್ಮ ಮಿತಿಯಲ್ಲಿ ಅಪ್ರಾಯೋಗಿಕ ಎನಿಸಿತು. ಅಂತೆಯೇ ಒಂದು ಜಿಲ್ಲೆಯ ರಂಗಮಾಹಿತಿ ಸಂಗ್ರಹಿಸಿ ಬರೆಯುವ ಕೆಲಸವನ್ನು ಒಬ್ಬರಿಗೇ ವಹಿಸಿ ಕಾರ್ಯಪ್ರವೃತ್ತರಾದೆವು. ಅದಕ್ಕಾಗಿ 'ಜಿಲ್ಲಾರಂಗಮಾಹಿತಿ' ಮಾಲಿಕೆ ಯೋಜನೆ ರೂಪಿಸಲಾಯಿತು. ಅದು ಫಲ ನೀಡಿತು. ಇಪ್ಪತ್ತಕ್ಕೂ ಅಧಿಕ ಜಿಲ್ಲೆಗಳ ರಂಗಮಾಹಿತಿ ಪುಸ್ತಕಗಳು ಈಗ ಹೊರಬಂದವು.

ಜಿಲ್ಲೆಯ ರಂಗಭೂಮಿ ಸಂಕ್ಷಿಪ್ತ ಇತಿಹಾಸ; ಹವ್ಯಾಸಿ, ವೃತ್ತಿತಂಡಗಳು, ನಟ ನಟಿ, ನಿರ್ದೇಶಕ, ನೇಪಥ್ಯ ಕಲಾವಿದರ ಸಂಕ್ಷಿಪ್ತ ಪರಿಚಯ; ರಂಗಮಂದಿರ – ಹೀಗೆ 13 ವಿಷಯಗಳ ಪಟ್ಟಿಮಾಡಿ ಲೇಖಕರಿಗೆ ಕಳಿಸಿಕೊಟ್ಟಿದ್ದೆವು. ರಂಗಲೇಖಕರು ವಿರಳವಾಗಿರುವುದರಿಂದ ಕೆಲವು ಜಿಲ್ಲೆಗಳಲ್ಲಿ ಕಲಾವಿದರಿಗೇ ಬರಹದ ಕೆಲಸ ನೀಡಲಾಗಿತ್ತು. ಒಬ್ಬರು ಕಲಾವಿದರ ಮೂಲಕ, ಮತ್ತೊಬ್ಬರು ನಾಟಕಕಾರರ ಮೂಲಕ, ಮತ್ತೆ ಕೆಲವರು ರಂಗತಂಡಗಳ ಕ್ರಿಯಾಶೀಲತೆ ಮೂಲಕ ಜಿಲ್ಲೆಯ ರಂಗಮಾಹಿತಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಮಗ್ರ ಎಂದು ಭಾವಿಸಬಾರದು. ಜಿಲ್ಲೆಯ ಕುರಿತು ಒಂದು ಪಕ್ಷಿನೋಟ ಇದು. ಒಂದು ಜಿಲ್ಲೆಯ ಕೆಲವಷ್ಟು ಮಾಹಿತಿಯನ್ನು ಈ ಪುಸ್ತಕಗಳು ಒಳಗೊಂಡಿವೆ. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

## ಸಂಚಾರಿ ನಾಟಕಗಳ ಜಿಲ್ಲೆ

ಚಿತ್ರದುರ್ಗ ಜಿಲ್ಲೆ ಬುಡಕಟ್ಟು ಜನಾಂಗಗಳ ತವರು. ಕೋಟೆ ಕೊತ್ತಲಗಳ ನಾಡು. ಬಯಲಾಟ, ಪೌರಾಣಿಕ, ಐತಿಹಾಸಿಕ, ಸಾಮಾಜಿಕಎಲ್ಲ ಪ್ರಕಾರಗಳ ನಾಟಕಗಳು ಇಲ್ಲಿ ಪ್ರಚಲಿತದಲ್ಲಿವೆ. ಹಳೇ ಮೈಸೂರು ಭಾಗದ ಏಕೈಕ ನಾಟಕ ಕಂಪನಿ ಕುಮಾರಸ್ವಾಮಿ ಅವರದು. ಅದು ಚಿತ್ರದುರ್ಗ ಮೂಲದ್ದು. ಜಿಲ್ಲೆಯಲ್ಲಿ ಶಿವಸಂಚಾರ ಹಾಗೂ ಜಮುರಾ ಎರಡು ರೆಪರ್ಟರಿಗಳಿವೆ (ಸಂಚಾರಿ ವೃತ್ತಿ ನಾಟಕ ತಂಡ). ಇವು ರಂಗತರಬೇತಿ ಶಾಲೆಗಳನ್ನು ನಡೆಸುತ್ತವೆ. ಈ ಶಾಲೆಯಲ್ಲಿ ಕಲಿತ ನೂರಾರು ಯುವಕರು ನಂತರ ನಾಟಕಗಳೊಂದಿಗೆ ರಾಜ್ಯ ಸಂಚಾರ ಮಾಡುತ್ತಾರೆ.

ಆಳವಾಗಿ ಬೇರುಬಿಟ್ಟಿರುವ ಇಲ್ಲಿನ ರಂಗಚಟುವಟಿಕೆಯ ಮುಖ್ಯ ಅಂಶಗಳನ್ನು ಪಟ್ಟಿಮಾಡುವುದೂ ದುಸ್ತರದ ಕೆಲಸ. ಇಂತಹ ಅಗಾಧವಾದ ಕೆಲಸ ಬೆನ್ನಿಗಿಟ್ಟುಕೊಂಡು ರಂಗಶಿಕ್ಷಣ ಪದವೀಧರ ಯುವಕ ಡಿ. ಶ್ರೀಕುಮಾರ್ ತಮಗೆ ದಕ್ಕಿದಷ್ಟು ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಅದಕ್ಕಾಗಿ ಅವರು ತುಂಬಾ ಪರಿಶ್ರಮ ಪಟ್ಟಿದ್ದಾರೆ. ನಟ, ನಿರ್ದೇಶಕ, ಪ್ರಸಾಧನ ಕಲೆಯನ್ನು ಬಲ್ಲ ಶ್ರೀಕುಮಾರ್ ರಂಗದ ಒಳಗಿನವರಾಗಿ ಚಿತ್ರಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಹಿರಿಯ ರಂಗಕರ್ಮಿ ಹಾಗೂ ನಾಟಕ ಅಕಾಡೆಮಿ ಸದಸ್ಯ ಪಿ. ತಿಪ್ಪೇಸ್ವಾಮಿ ಅವರು ಮಾರ್ಗದರ್ಶನ ನೀಡಿದ್ದಾರೆ. ಬಿಟ್ಟಿರುವ ಮತ್ತಷ್ಟು ವಿವರಗಳು, ವಿಶ್ಲೇಷಣೆಗಳಿಂದ ಚಿತ್ರದುರ್ಗ ಜಿಲ್ಲೆ ರಂಗ ಇತಿಹಾಸ ಕಟ್ಟುವ ಕೆಲಸ ಮುಂದುವರಿಯಬೇಕಿದೆ.

**– ಗುಡಿಹಳ್ಳಿ ನಾಗರಾಜ**
ಪ್ರಕಟಣಾ ಸಮಿತಿ ಪರವಾಗಿ

ಪ್ರಕಟಣಾ ಸಮಿತಿ ಸದಸ್ಯರು

**ಎಂ.ಎಸ್. ಗುಣಶೀಲನ್**

**ಎಸ್.ಕೆ. ಕೊನೆಸಾಗರ**

**ಮುದ್ದಣ್ಣ ರಟ್ಟೇಹಳ್ಳಿ**

# ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿ

**ಶ್ರೀ ಎಲ್.ಬಿ. ಶೇಖ (ಮಾಸ್ತರ)**

ಅಧ್ಯಕ್ಷರು,

ಕರ್ನಾಟಕ ನಾಟಕ ಅಕಾಡೆಮಿ, ವಿಜಯಪುರ

ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ

**ಶ್ರೀ ಪಿ. ತಿಪ್ಪೇಸ್ವಾಮಿ**, ಚಳ್ಳಕೆರೆ

**ಶ್ರೀ ರಾಜಪ್ಪ ಕಿರಗಸೂರು**, ಮೈಸೂರು

**ಶ್ರೀ ಎಸ್.ಕೆ. ಕೊನೆಸಾಗರ**, ಹುನಗುಂದ

**ಶ್ರೀ ಎಂ.ಎಸ್. ಗುಣಶೀಲನ್**, ಬೆಂಗಳೂರು

**ಶ್ರೀಮತಿ ಕಲ್ಪನಾ ನಾಗನಾಥ್**, ಬೆಂಗಳೂರು

**ಶ್ರೀ ಮುದ್ದಣ್ಣ ರಟ್ಟೆಹಳ್ಳಿ**, ಹಾವೇರಿ

**ಶ್ರೀಮತಿ ಅನ್ನಪೂರ್ಣ ಸಾಗರ**, ಶಿವಮೊಗ್ಗ

**ಶ್ರೀ ಎಚ್.ಷಡಾಕ್ಷರಪ್ಪ ಹೊಸಮನಿ**, ಹರಪನಹಳ್ಳಿ

**ಶ್ರೀ ಕೆ. ಜಗುಚಂದ್ರ**, ಧಾರವಾಡ

**ಶ್ರೀ ಉಮೇಶ ಸಾಲಿಯಾನ**, ಕಾಸರಗೋಡು

**ಶ್ರೀ ಹಾಲ್ಕುರಿಕೆ ಶಿವಶಂಕರ್**, ಕೊಪ್ಪಳ

**ಶ್ರೀ ವಿ.ಎನ್. ಅಕ್ಕಿ**, ರಾಯಚೂರು

**ಶ್ರೀ ಬಿ.ಎಂ. ರಾಮಚಂದ್ರ**, ಮೈಸೂರು

**ಶ್ರೀ ಎನ್.ಕೆ. ರಾಮಕೃಷ್ಣ**, ಬೆಂಗಳೂರು

**ಶ್ರೀಮತಿ ಎ. ವರಲಕ್ಷ್ಮಿ**, ಬಳ್ಳಾರಿ

ಕೋಪ್ಟ್ ಆದ ಸಹಸದಸ್ಯರು

**ಶ್ರೀ ಗುಡಿಹಳ್ಳಿ ನಾಗರಾಜ, ಬೆಂಗಳೂರು**

**ಡಾ. ಶ್ರೀಪಾದ ಭಟ್**, ಶಿರಸಿ

**ಶ್ರೀ ಎಲ್.ಎಚ್. ರಂಗನಾಥಪ್ಪ, ಶಿರಾ**

ರಿಜಿಸ್ಟ್ರಾರ್

**ಬಿ. ಮಂಜುನಾಥ ಆರಾಧ್ಯ**

ಯೋಜನಾ ಸಹಾಯಕರು

**ಕೆ. ರೇವಣ್ಣ**

ಕಚೇರಿ ಸಿಬ್ಬಂದಿ

**ಸೌಭಾಗ್ಯಲಕ್ಷ್ಮೀ, ಎಂ. ಭೋಜಣ್ಣ, ಸುಶೀಲಮ್ಮ**

# ಲೇಖಕರ ಮಾತು

'ನಮಸ್ಕಾರ ನಾನು ಶ್ರೀಕುಮಾರ್ ಡಿ. ಎಂ.ಈ.ಎಸ್. ರಂಗಶಾಲೆ, ಬೆಂಗಳೂರು ಇಲ್ಲಿ ನಾಟಕ ಡಿಪ್ಲೊಮ ಶಿಕ್ಷಣ ಪಡೆದವರಾಗಿರುತ್ತೇನೆ. ಕರ್ನಾಟಕ ನಾಟಕ ಅಕಾಡೆಮಿಯ ವತಿಯಿಂದ ಚಿತ್ರದುರ್ಗ ಜಿಲ್ಲೆಯ ರಂಗ ಕೈಪಿಡಿ ಬರೆಯಲು ತಿಳಿಸಿದ್ದಕ್ಕಾಗಿ ನಾನು ಅಭಾರಿಯಾಗಿರುತ್ತೇನೆ.

ನನ್ನಂತ ಯುವ ರಂಗ ಕಲಾವಿದನಿಗೆ ಮಾಹಿತಿ ಸಂಗ್ರಹ ಎನುವಂತಹ ಕಾರ್ಯ ಬಹಳ ಜವಾಬ್ದಾರಿಯಾದ ಕೆಲಸವಾಗಿತ್ತು. ಜವಾಬ್ದಾರಿಯನ್ನು ನೀಡಿದ್ದಕ್ಕಾಗಿ ನಮ್ಮ ಜಿಲ್ಲೆಯ ನಾಟಕ ಅಕಾಡೆಮಿ ಸದಸ್ಯರಾದ ಶ್ರೀ ಪಿ.ತಿಪ್ಪೇಸ್ವಾಮಿಯವರಿಗೆ, ರಿಜಿಸ್ಟಾರ್ ಸಿದ್ಧರಾಜರವರಿಗೆ ಗುಡಿಹಳ್ಳಿ ನಾಗರಾಜರವರ ಪ್ರೋತ್ಸಾಹಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ನಾನು ರಂಗ ಮಾಹಿತಿ ಸಂಗ್ರಹ ಬರೆಯಲು ಪಟ್ಟ ಕಷ್ಟದ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದೇನೆ. ಜಿಲ್ಲೆಯ ಆರು ತಾಲ್ಲೂಕುಗಳಿಗೆ ಸ್ವತಃ ಹೋಗಿ ಅಲ್ಲಿನ ಕಲಾವಿದರನ್ನು ಭೇಟಿಯಾಗಿ ಮಾಹಿತಿಯನ್ನು ನೀಡುವಂತೆ ಕೇಳಿಕೊಂಡೆ. ಅನೇಕ ಕಲಾವಿದರಿಗೆ ಗೌರವ ಪೂರ್ವಕವಾಗಿ ರಂಗ ಮಾಹಿತಿ ಸಂಗ್ರಹದ ಬಗ್ಗೆ ದೂರವಾಣಿ ಮೂಲಕ ಕರೆಮಾಡಿ ತಿಳಿಸಿದಾಗ ತುಂಬಾ ಸಂತೋಷದಿಂದ ನನಗೆ ಉತ್ತೇಜನ ನೀಡಿ ತಮಗೆ ತಿಳಿದ ನಮ್ಮ ಜಿಲ್ಲೆಯ ನಾಟಕ ಸಂಸ್ಕೃತಿಯ ಬಗ್ಗೆ ವಿವರಿಸಿದರು. ಹಾಗೇಯೆ ತಮ್ಮ ಬಳಿ ಇದ್ದ ಕೆಲವು ಕಲಾವಿದರ ಮಾಹಿತಿಗಳನ್ನು ನೀಡಿರುತ್ತಾರೆ, ದೂರವಾಣಿ ಮೂಲಕ ಕರೆ ಮಾಡಿದ ತಕ್ಷಣ ನನ್ನ ಬಳಿ ಬಂದು ಅವರ ಫೋಟೋ ವಿವರ ನೀಡಿದ ಕಲಾವಿದರನ್ನು ಕಂಡೆನು, ನನಗೆ ಆಶ್ಚರ್ಯವಾಯಿತು. ಇನ್ನೂ ಕೆಲವು ಕಲಾವಿದರಲ್ಲಿ ಕೇಳಿದರೆ ಈ ಬಗ್ಗೆ ಒಣ ಮಾತುಗಳನ್ನಾಡುತ್ತ ನನ್ನ ಸಮಯ ಮತ್ತು ತಾಳ್ಮೆಯನ್ನು ಪರಿಕ್ಷೆಗೆ ಒಡ್ಡಿದ್ದರು, ಆದರೂ ನನ್ನ ತಾಳ್ಮೆಯನ್ನು ಕಾಪಾಡಿಕೊಂಡು ಅವರ ಬಗ್ಗೆ ಬೇರೆ ಕಲಾವಿದರಿಂದ ತಿಳಿದು ಈ ರಂಗ ಮಾಹಿತಿ ಸಂಗ್ರಹದ ಕೈಪಿಡಿಯಲ್ಲಿ ಬರೆದಿರುತ್ತೇನೆ. ಇದರಿಂದ ನನಗೆ ತಿಳಿದ ವಿಷಯವೇನೆಂದರೆ ತಮ್ಮ ಬಗ್ಗೆ ಮಾಹಿತಿಯನ್ನು ನೀಡಿ ಎಂದು ಕೇಳಿಕೊಂಡರೂ ತಲೆ ಕೆಡಿಸಿಕೊಳ್ಳದೇ ಆಗಲಿ, ನೋಡೋಣ ಎಂದು ಹೇಳಿದ ಕಲಾವಿದರನ್ನು ಕಂಡೆನು.

ಕಲಾವಿದರ ಹೆಸರು ಹೇಳಿಕೊಂಡು ದುಡಿಯುತ್ತಿರುವ ಕೆಲವು ಕಲಾವಿದರು ನನ್ನ ಬಳಿ ಮಾತು ಸಹ ಆಡಲು ಯೋಚಿಸುತ್ತಿದ್ದರು. ಇದು ನನಗೆ ಉತ್ತಮ ಅನುಭವವಾಯಿತು.

ಈ ಮಾಹಿತಿ ಸಂಗ್ರಹದ ಬಗ್ಗೆ ಚಿತ್ರದುರ್ಗ ಆಕಾಶವಾಣಿಯಲ್ಲಿ ಪ್ರಸಾರವನ್ನು ಮಾಡಿಸಲಾಗಿತ್ತು, ಅನೇಕ ನಾಟಕ ಕಾರ್ಯಕ್ರಮದ ವೇದಿಕೆಗಳಲ್ಲಿ ನಾಟಕ ಅಕಾಡೆಮಿ ಸದಸ್ಯರಾದ ಶ್ರೀ ಪಿ. ತಿಪ್ಪೇಸ್ವಾಮಿಯವರು ತಿಳಿಸಿದ್ದರು. ಎಲ್ಲಾ ಕನ್ನಡ ದಿನ ಪತ್ರಿಕೆ ಯಲ್ಲಿಯೂ ಪ್ರಚಾರ ಮಾಡಲಾಗಿದ್ದರೂ ಸಕಾಲಕ್ಕೆ ಕೆಲವು ಕಲಾವಿದರು ಮಾಹಿತಿಯನ್ನು ನೀಡದಿರುವುದರಿಂದ ಹೆಸರು ಸಂಘ ಸಂಸ್ಥೆ ಮಾಹಿತಿಬಿಟ್ಟು ಹೋಗಿರಬಹುದು. ಅದು ನಾನು ಬೇಕಾಗಿ ಬಿಟ್ಟಿರುವುದಿಲ್ಲ. ಯಾವುದೇ ಕಲಾವಿದರು ಅನ್ಯಥಾ ಭಾವಿಸಬಾರದು. ಇದರಲ್ಲಿ ನನ್ನ ತಪ್ಪು ಎಷ್ಟು ಇದೆಯೋ ಮಾಹಿತಿ ನೀಡದಿರುವ ಕಲಾವಿದರ ತಪ್ಪು ಅಷ್ಟೆ ಇದೆ. ಮುಂದಿನ ದಿನಗಳಲ್ಲಿ ಪರಿಷ್ಕೃತ ಆವೃತಿಯಲ್ಲಿ ಸೇರಿಸಬಹುದಾಗಿದೆ. ರಂಗ ಮಾಹಿತಿ ಯಾವ ಕಾಲಕ್ಕೂ ಪರಿಪೂರ್ಣವಲ್ಲ ಮತ್ತು ಅದಕ್ಕೆ ಕೊನೆಯೂ ಇಲ್ಲ.

ನಾನು ಅನೇಕ ಹೆಸರಾಂತ ಕಲಾವಿದರೊಂದಿಗೆ ಹಾಗೂ ಹಿರಿಯ ಕಲಾವಿದರಿಗೆ ಚರ್ಚಿಸಿ, ರಂಗಭೂಮಿಯ ವಿವರಗಳನ್ನು ಪಡೆದು ರಂಗಮಾಹಿತಿ ಕೈಪಿಡಿ ಸಿದ್ದ ಪಡಿಸಿದ್ದೇನೆ, ಹಿರಿಯರಾದ ಅಶೋಕ ಬಾದರದಿನ್ನಿಯವರೂ ನಾಟಕ ಅಕಾಡೆಮಿ ಸದಸ್ಯರಾದ ಶ್ರೀ ಪಿ.ತಿಪ್ಪೇಸ್ವಾಮಿಯವರು ಡಾ॥ ರಾಮಚಂದ್ರನಾಯಕ, ಜಮುರಾ ಸುತ್ತಾಟದ ವ್ಯವಸ್ಥಾಪಕರಾದ ಎ.ಜೆ.ಪರಮಶಿವಯ್ಯ, ರಚನಾ ಹವ್ಯಾಸಿ ಕಲಾ ಸಂಘದ ಎಂ.ಸಿ.ಮಂಜುನಾಥ್, ಉಪನ್ಯಾಸಕರಾದ ನುಂಕಪ್ಪ, ವಿಮರ್ಶಕರಾದ ಡಾ.ವಿ.ಬಸವರಾಜು, ಅಕಾಡೆಮಿಯ ಮಾಜಿ ಸದಸ್ಯರಾದ ಕೆ.ನಾಗರಾಜ್, ಹೊಸದುರ್ಗ ತಾಲೂಕು ಸಾಣೇಹಳ್ಳಿ ಶಿವಸಂಚಾರದ ಕಲಾವಿದರಾದ ಲಕ್ಕಮುತ್ತೆನಹಳ್ಳಿ ರಾಜು, ಹೊಳಲ್ಕೆರೆ ತಾಲೂಕು ಮಲ್ಲಾಡಿಹಳ್ಳಿ ತಿರುಕರಂಗದ ಬುದ್ದನ ಗೌಡರ್ ಹಾಗೂ ಸಿಬ್ಬಂದಿವರ್ಗ, ಹೊಸದುರ್ಗದ ಕಲಾವಿದ ಮೂರ್ತಿ, ಹಿರಿಯೂರಿನ ಪ್ಯಾಡ್‌ಭದ್ರಿ, ಮಲಪ್ಪನಹಳ್ಳಿ ಮಹಲಿಂಗಪ್ಪ, ಮೊಳಕಾಲ್ಮೂರು ತಾಲೂಕು ಬಿ.ಜಿ.ಕೆರೆಯ ಜಿ.ವಿ.ಡ್ರಾಮ ಸೀನರಿಯ ಜಿ. ವಾಜೀದ್, ಡಿ.ಓ. ಮುರಾರ್ಜಿ, ಚಿತ್ರದುರ್ಗದ ಶ್ರೀ ಸತ್ಯನಾರಾಯಣ ಡ್ರಾಮ ಸೀನರಿಯ ಅಣ್ಣಿರಾವ್, ಬಂಗಾರಕ್ಕನಹಳ್ಳಿ ಕಮಲಮ್ಮ, ಹಿರಿಯ ರಂಗಕಲಾವಿದ ಬಿದರಿಕೆರೆ ಸುಬಾನ್‌ಸಾಬ್, ತಬಲ ವಾದಕ ಜಯಣ್ಣ, ಪರೋಕ್ಷವಾಗಿ ಕೈಪಿಡಿಯನ್ನು ಸಿದ್ದಪಡಿಸಲು ನನಗೆ ಮಾಹಿತಿ ಮತ್ತು ಮಾರ್ಗದರ್ಶನ ನೀಡಿದವರಿಗೆಲ್ಲ ಮತ್ತು ಸುಂದರವಾಗಿ ಡಿ.ಟಿ.ಪಿ ಮಾಡಿಕೊಟ್ಟ ಗೆಳೆಯ ಎಂ.ರವಿ, ಜೀವನ್ ಕಂಪ್ಯೂಟರ್, ಚಿತ್ರದುರ್ಗ ಇವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀಕುಮಾರ್ ಡಿ.

# ಪರಿವಿಡಿ


| | | |
|---|---|---|
| 1. | ಚಿತ್ರದುರ್ಗ ಜಿಲ್ಲೆಯ ರಂಗಭೂಮಿ ಸಂಕ್ಷಿಪ್ತ ಇತಿಹಾಸ | 1 |
| 2. | ವೃತ್ತಿ ರಂಗಭೂಮಿ | 2 |
| 3. | ವೃತ್ತಿ ತಂಡಗಳ ಮಾಹಿತಿ | 3 |
| 4. | ಹವ್ಯಾಸಿ ರಂಗಭೂಮಿ | 3 |
| 5. | ಮಕ್ಕಳ ರಂಗ ಭೂಮಿಯ ಮಾಹಿತಿ ಹಾಗೂ ಶಾಲಾ ಕಾಲೇಜಿನ ರಂಗ ಚಟುವಟಿಕೆಗಳು | 4 |
| 6. | ಚಿತ್ರದುರ್ಗ ಜಿಲ್ಲೆಯ ಪ್ರಮುಖ ರಂಗ ಕಲಾವಿದರು | 6 |
| 7. | ರಂಗ ನಟಿಯರ ಮಾಹಿತಿ | 23 |
| 8. | ನೇಪಥ್ಯ ಕಲಾವಿದರ ವಿವರ | 29 |
| 9. | ನಾಟಕದ ಹಾರ್ಮೊನಿಯಂ ಮೇಷ್ಟ್ರು | 31 |
| 10. | ರಂಗ ಪರದೆ / ಉಡುಪು / ಪರಿಕರ ಒದಗಿಸುವ ಸಂಸ್ಥೆಗಳು | 37 |
| 11. | ಜಿಲ್ಲೆಯ ವಿಶೇಷ ಪ್ರದರ್ಶನಗಳು | 39 |
| 12. | ರಂಗ ತರಬೇತಿ ಶಿಬಿರಗಳು | 39 |
| 13. | ಜಿಲ್ಲೆಯಲ್ಲಿರುವ ರಂಗಶಾಲೆ | 40 |
| 14. | ಜಿಲ್ಲೆಯಲ್ಲಿರುವ ರಂಗ ಪ್ರಯೋಗ ಶಾಲೆ | 41 |

15. ಜಿಲ್ಲಾ ರಂಗಮಂದಿರಗಳು 45

16. ರಂಗ ವಿಮರ್ಶಕರು 45

17. ಚಿಂತಕರು 46

18. ರಂಗ ದಾಖಲೆ ಇಟ್ಟುಕೊಂಡಿರುವವರು 47

19. ಪ್ರಕಟಣೆಗೊಂಡಿರುವ ರಂಗಭೂಮಿ ಕುರಿತಾದ ವಿಶೇಷ ಪುಸ್ತಕಗಳು ಹಾಗೂ ರಂಗ ನಾಟಕಗಳ ಪಟ್ಟಿ 48

20. ಶಾಲಾ ಕಾಲೇಜು 50

21. ಚಿತ್ರ ಸಂಪುಟ 52

# ಚಿತ್ರದುರ್ಗ ಜಿಲ್ಲೆಯ ರಂಗಭೂಮಿ ಸಂಕ್ಷಿಪ್ತ ಇತಿಹಾಸ

ಚಿತ್ರದುರ್ಗ ಜಿಲ್ಲೆ ಬುಡಕಟ್ಟು ಜನಾಂಗದ ತವರು. ಗಂಡು ಕಲೆಗಳಿಗೆ ಹೆಸರಾದ ಭೂಮಿಯಾಗಿದೆ. ಬಯಲಾಟ ಮೊದಲು ಪ್ರಚಲಿತದಲ್ಲಿದ್ದವು. ಬಯಲಾಟದಲ್ಲಿ "ಶ್ರೀಕೃಷ ಪಾರಿಜಾತ" "ಕರಿಭಂಟನ ಕಾಳಗ" ಬಹಳ ಪ್ರಚಲಿತದಲ್ಲಿತ್ತು ಮತ್ತು ಹೆಣ್ಣು ಪಾತ್ರವನ್ನು ಪುರುಷರೆ ಮಾಡುತಿದ್ದರು. "ತೋಂತತ್ತಝುಣ ತೋಂತತತ್ತಝುಣ" ಎನ್ನುತ್ತಾ ಪಾತ್ರಗಳು ರಂಗ ಪ್ರವೇಶ ಮಾಡುವಾಗ ಈಗ ಬಂದವರು ಯಾರು ಎಂದು ಸಾರತಿಯು ಕೇಳಿದಾಗ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತಿದ್ದರು, ಪುರುಷರೆ ಸ್ರೀ ಪಾತ್ರವನ್ನು ಮಾಡುತಿದ್ದರು ಹಾಗೂ ಈ ಪಾತ್ರ ಮಾಡುವವರಿಗೆ  ಅವರು ಹಾಕುವ ವಂತಿಕೆಯಲ್ಲಿ ರಿಯಾಯಿತಿ ಸಿಗುತ್ತಿತ್ತು.

ಬಯಲಾಟದ ನಂತರ ಓದುಬರಹ ಕಲಿತಿದ್ದವರು ಸೇರಿಕೊಂಡು ಸಾಮಾಜಿಕ ನಾಟಕ ಅಭಿನಯಿಸಲು ಯೋಚಿಸಿ ಸಾಮಾಜಿಕ ನಾಟಕಗಳಿಗೆ ಆಕರ್ಷಿತರಾಗಿ ಜಿಲ್ಲೆಯ ಎಲ್ಲಾ ಹಳಿಗಳಲ್ಲೂ ವರ್ಷಕ್ಕೆ ಒಂದಾದರೂ ನಾಟಕ ವಾಡುವ ಪರಿಪಾಠವಿತ್ತು ಈ ಸಂದರ್ಭದಲ್ಲಿ ಒಂದು ನಾಟಕ ಕಲಿಯಲು  ಎರಡರಿಂದ ಮೂರು ತಿಂಗಳು ತಾಲೀಮು ಮಾಡಲಾಗುತಿತ್ತು,  ನಾಟಕವಾಡುವ ಎಲ್ಲರೂ ಸೇರಿಕೊಂಡು  ಇಷ್ಟವಾದ ನಾಟಕವನ್ನು ಆಯ್ಕೆ ಮಾಡುತಿದ್ದರು ಜೆರಾಕ್ಸ ಇಲ್ಲದ ಕಾಲವದು. ಕೈಯಲ್ಲಿ ಬರೆದುಕೊಂಡು ತಾಲೀಮು ಮಾಡಲಾಗುತಿತ್ತು,  ನಾಟಕದಲ್ಲಿ ಸ್ತ್ರೀ ಪಾತ್ರ ಮಾಡಲು ಹಿಂಜರಿಯುತಿದ್ದರು. ನಾಟಕದ ಮಹಿಳೆ ಎಂದರೆ ಅವರನ್ನ ನೋಡುವ ದೃಷ್ಟಿಕೋನವೆ ಬೇರೆಯ ತರಹವಾಗಿತ್ತು, ಇಂತಹ ಸಮಯದಲ್ಲಿ ನಟಿಯಾರಾದ ಬಂಗಾರಕ್ಕನಹಳ್ಳಿಯ ಶ್ರೀಮತಿ ಕಮಲಮ್ಮ ಹಿರಿಯೂರಿನ ಶ್ರೀಮತಿ ವಿಮಲಾಕ್ಷಮ್ಮ ಮುಂತಾದ ನಟಿಯರು ತಮ್ಮ ಜೀವನವನ್ನೆ ರಂಗಭೂಮಿಗಾಗಿ ಮೀಸಲಿಟ್ಟರು. ಸಾಮಾಜಿಕ ನಾಟಕಗಳು ಜನಪ್ರಿಯ ಆಗುತ್ತಾ ಹೋದಂತೆ ಮಹಿಳೆಯರು ಒಬ್ಬಬ್ಬರಾಗಿ ರಂಗಕ್ಕೆ ಪ್ರವೇಶ ಮಾಡಲಾರಂಬಿಸಿದರು.  ಚಿತ್ರದುರ್ಗದ ಅಕ್ಕ-ಪಕ್ಕದ ಜಿಲ್ಲೆಗಳಾದ  ದಾವಣಗೆರೆ ಜಿಲ್ಲೆಯ  ಹೆಸರಾಂತ ಕಲಾವಿದರು, ಬಳ್ಳಾರಿ ಜಿಲ್ಲೆಯ ಶ್ರೀಮತಿ ಸುಭದ್ರಮ್ಮ ಮನ್ಸೂರು, ಮರಿಯಮ್ಮನ ಹಳ್ಳಿಯ ಶ್ರೀಮತಿ ನಾಗರತ್ನಮ್ಮ ಮುಂತಾದ ಕಲಾವಿದರನ್ನ ಆಹ್ವಾನಿಸಿ ನಾಟಕ ಪ್ರದರ್ಶನ ಮಾಡುತ್ತಿದ್ದರು. ಚಿತ್ರದುರ್ಗ ಜಿಲ್ಲೆಯು ಕಲಾಸಂಪನ್ನರನ್ನ ಸೃಜಿಸಿದಂತಹ ಕಲಾಕೇಂದ್ರವಾಗಿತ್ತು. ನಗರದ ಕರುವಿಕಟ್ಟೆ ಸರ್ಕಲ್‌ನಲ್ಲಿ ಪ್ರತಿ ವರ್ಷ  ಏಕನಾಥೇಶ್ವರಿ, ತಿಪ್ಪಿನಘಟ್ಟಮ್ಮ ಜಾತ್ರೆ ಹಾಗೂ ಬೇಟೆ ಉತ್ಸವಗಳಲ್ಲಿ ಆಗಿನ

ಯುವಕರು ಸೇರಿ ನಾಟಕಗಳನ್ನು ಪ್ರದರ್ಶನ ಮಾಡುತ್ತಿದ್ದರು, ಚಿತ್ರದುರ್ಗ ಪೈಲ್ವಾನ್ ನಂಜಪ್ಪನವರು ಉತ್ತಮವಾದ ತಬಲ ವಾದಕರಾಗಿದರು. ಮೈಸೂರು ಜಗನ್‌ಮೋಹಿನಿ ಅರಮನೆಯಲ್ಲಿ ನಾಟಕ ಪ್ರದರ್ಶನ ನೀಡಿದ್ದಾರೆ. ರಾಜವೀರ ಮದಕರಿ ನಾಯಕರು ಜಿಲ್ಲೆಯಲ್ಲಿ ಆಳ್ವಿಕೆ ನೆಡೆಸಿದ್ದು ಹಾಗೂ ಓನಕೆ ಓಬವ್ವ ರಂತಹ ವೀರ ಮಹಿಳೆಯರು ಇದ್ದ ಇತಿಹಾಸದ ಮಾಹಿತಿಯಯನ್ನು ಮರಡಿಹಳ್ಳಿ ಸೀತಾರಾಮರೆಡ್ಡಿಯವರ ದಳವಾಯಿ ಮುದ್ದಣ್ಣ ನಾಟಕ ಹಾಗೂ ರಾಜವೀರ ಮದಕರಿ ನಾಯಕನ ನಾಟಕವನ್ನು ಡಾ. ರಾಮಚಂದ್ರ ನಾಯಕ ಗೆಳೆಯರ ಬಳಗದ ವತಿಯಿಂದ ಹೆಚ್ಚಾಗಿ ಅಬಿನಯಿಸತೊಡಗಿದರು ಶ್ರೀಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ದಳವಾಯಿ ಮುದ್ದಣ ನಾಟಕವನ್ನು 3 ಗಂಟೆಗಳ ಕಾಲ ಸಂಪೂರ್ಣವಾಗಿ ವಿಕ್ಷೀಸಿ ಮೆಚ್ಚುಗೆ ವ್ಯಕ್ತಪಡಿಸಿದ್ದರು,

ಚಿತ್ರದುರ್ಗದಲ್ಲಿ ಹೀಗೆ ಹವ್ಯಾಸಿ ರಂಗ ಚಟುವಟಿಕೆಗಳು ನಡೆಯುತ್ತಿರುವಾಗ ಎನ್.ಎಸ್.ಡಿ.ಯ ಪದವೀದರರಾದ ಗೋಪಾಲಕೃಷ ನಾಯರಿ ಹಾಗೂ ಪ್ರಜಾವಾಣಿ ದಿನಪತ್ರಿಕೆಯ ವರದಿಗಾರರಾಗಿದ್ದ ಗುಡಿಹಳ್ಳಿ ನಾಗರಾಜ, ರಾಜಣ್ಣ, ರಚನಾ ತಿಪ್ಪೇಸ್ವಾಮಿ, ಬಿ.ಕುಮಾರ್,ಬಿ, ತಿಪ್ಪೇರುದ್ರಪ್ಪ, ರಚನಾ ಮಂಜುನಾಥ್, ಶೇಷಣ್ಣಕುಮಾರ್, ಮುಂತಾದ ರಂಗಾಸಕ್ತರು ಸೇರಿಕೊಂಡು ಚಿತ್ರದುರ್ಗದಲ್ಲಿ ಸಮಸ್ತರು ಎನ್ನುವ ತಂಡವನ್ನು ಪ್ರಾರಂಬಿಸಿ ಅನೇಕ ಎನ್.ಎಸ್.ಡಿ. ಪಧವೀಧರರಾದ ಎಲ್. ಕೃಷ್ಣಪ್ಪ, ಸಾಂಬಶಿವ ದಳವಾಯಿ. ಬಾರತಿ, ಮುಂತಾದ ರಂಗ ನಿರ್ದೇಶಕರನ್ನು ಆಹ್ವಾನಿಸಿ ರಂಗತರಬೇತಿಯನ್ನು ನೀಡಲಾರಂಬಿಸಿದರು. ಇದರಿಂದ ಯುವ ರಂಗಸ್ತರು ಆಕರ್ಷಿತರಾದರು, 1950-60ರಲ್ಲಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ನಾಟಕ ಕಲೆಗೆ ಕಲಾಕೇಂದವಾಗಿತ್ತು, ಚಳ್ಳಕೆರೆ ತಾಲ್ಲೂಕು ತಪ್ಪಗೊಂಡನಹಳ್ಳಿ ಹನುಮಂತರಾಯಪ್ಪ ನವರು ನಾಟಕದ ಪರದೆಗಳನ್ನು ತಾವೇ ಆಕರ್ಷಕವಾಗಿ ಬರೆದು ಸರಬರಾಜು ಮಾಡುತ್ತಿದ್ದರು ಈಗ ಅವರ ಮಕ್ಕಳಾದ ಮಲ್ಲಿಕಾರ್ಜುನ್ ಮುಂದುವರಿಸಿಕೊಂಡು ಹೋಗುತಿದ್ದಾರೆ. ಕ್ರಮೇಣ ಸಿನಿಮಾಗಳ ಹಾವಳಿಯಿಂದ ನಾಟಕಗಳ ಪ್ರದರ್ಶನ ಕಡಿಮೆಯಾಗುತ್ತ ಹೋಗಿವೆ. ವೃತಿರಂಗಭೂಮಿ ಯಲ್ಲಿ ಚಿತ್ರದುರ್ಗದ ಶ್ರೀಕುಮಾರೇಶ್ವರ ನಾಟಕ ಸಂಘ ಅಂದಿನಿಂದ ಇಂದಿನವರೆಗೆ ರಾಜ್ಯಾದ್ಯಂತ ವಿವಿದ ನಾಟಕಗಳನ್ನು ಪ್ರದರ್ಶನ ಮಾಡುತ್ತಿದೆ. ಹಳೇ ಮೈಸೂರು ಭಾಗದಲ್ಲಿರುವ ಏಕೈಕ ನಾಟಕ ಕಂಪನಿ ಇದಾಗಿದೆ.

## ವೃತ್ತಿ ರಂಗಭೂಮಿ

ಜಿಲ್ಲೆಯಲ್ಲಿ ಚಿತ್ರದುರ್ಗ ಜಿಲ್ಲಾ ಕೇಂದ್ರವಾಗಿದ್ದು ಇಲ್ಲಿಗೆ ಅನೇಕ ರಂಗ ಕಲಾವಿದರು ವೃತಿಯನ್ನಾಗಿ ನಾಟಕಗಳಲ್ಲಿ ಮುಂದುವರಿಸಿದರು ಕೆಲವು ಅಕ್ಕ ಪಕ್ಕದ ಜಿಲ್ಲೆಯ ವೃತ್ತಿ ಕಲಾವಿದರು ವಲಸೆ ಬಂದು ಇದೇ ಜಿಲ್ಲೆಯಲ್ಲಿ ತಮ್ಮ ಜೀವನವನ್ನು ರೂಪಿಸಿ ಕೊಂಡವರಿದ್ದಾರೆ. ವೃತ್ತಿಯಾಗಿ ರಂಗಭೂಮಿಯನ್ನು ನಂಬಿದವರು ಬಹಳ ಜನರಿದ್ದಾರೆ.

ರಂಗಭೂಮಿಯನ್ನು ನಂಬಿ ಬೇರೆ, ಬೇರೆ ಜಿಲ್ಲೆಗಳಿಗೆ ಅನೇಕ ಕಲಾವಿದರು ವಲಸೆ ಹೋಗಿದ್ದಾರೆ.

ಅಂದಿನಿಂದ ಇಂದಿನವರೆಗೂ ಚಿತ್ರದುರ್ಗದ ಕುಮಾರೇಶ್ವರ ನಾಟಕ ಸಂಘ ರಾಜ್ಯದ ವಿವಿದ ಜಿಲ್ಲೆಗಳಲ್ಲಿ ತನ್ನ ವೃತ್ತಿ ರಂಗ ಸೇವೆಯನ್ನು ಮಾಡುತ್ತಿದೆ. ಚಿತ್ರದುರ್ಗ ನಗರದ ಸಂತೆ ಹೊಂಡದ ಬಳಿ ಇದ್ದ ಎಸ್.ಎಲ್.ಎನ್. ರಂಗ ಮಂದಿರದಲ್ಲಿ ಅನೇಕ ಹಿರಿಯ ಹೆಸರಾಂತ ಕಲಾವಿದರಾದ ಗುಬ್ಬಿ ವೀರಣ್ಣ, ಮಾಸ್ಟರ್ ಹಿರಣ್ಣಯ್ಯ, ಡಾ॥ರಾಜ್‌ಕುಮಾರ್, ಸರೋಜದೇವಿ, ಸುಧೀರ್, ದಿರೇಂದ್ರ ಗೋಪಾಲ್, ದತ್ತಣ್ಣ ಮುಂತಾದ ನಟರು ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ

ಜಿಲ್ಲೆಯಲ್ಲಿ ಪ್ರಸ್ತುತ ವೃತ್ತಿ ಕಲಾವಿದರ ಬಳಗವೆ ಇದೆ. ತಮ್ಮ ಜೀವನವನ್ನೇ ರಂಗಭೂಮಿಗೆ ಮೀಸಲಾಗಿಟ್ಟಿರುವ

ಆ) ಶಿವಕುಮಾರ ಕಲಾ ಸಂಘ. ಸಾಣೇಹಳ್ಳಿ.

ಅ) ಶ್ರೀಕುಮಾರೇಶ್ವರ ನಾಟಕ ಸಂಘ. ಮುಂತಾದ ತಂಡಗಳಿವೆ.

## ವೃತ್ತಿ ತಂಡಗಳ ಮಾಹಿತಿ

ಶ್ರೀಕುಮಾರೇಶ್ವರ ನಾಟಕ ಸಂಘ, ಚಿತ್ರದುರ್ಗ – ಚಿತ್ರದುರ್ಗ ನಗರಕ್ಕೆ ಸಮೀಪ ಇರುವ ಮಠದ ಕುರುಬರ ಹಟ್ಟಿಯವರು. ಶಿವಕುಮಾರ ಕಲಾ ತಂಡ ಸಾಣೇಹಳ್ಳಿ, ಹೊಸದುರ್ಗ ತಾಲ್ಲೂಕು, ಶ್ರೀ ಕುಮಾರೇಶ್ವರ ನಾಟಕ ಸಂಘ, ಹುಣಸೇಕಟ್ಟೆ ಚಿತ್ರದುರ್ಗ.

## ಹವ್ಯಾಸಿ ರಂಗಭೂಮಿ

ಸ್ವಾತಂತ್ರ್ಯ ಚಳುವಳಿಯಲ್ಲಿ ಬ್ರಿಟಿಷರ ವಿರುದ್ಧ ಜನ ಜಾಗೃತಿಗಾಗಿ ಹಳ್ಳಿಯಲ್ಲಿ ಯುವಕರು ತಂಡಗಳನ್ನು ಮಾಡಿಕೊಂಡು ಬ್ರಿಟಿಷರ ವಿರುದ್ಧ ಬೀದಿ ನಾಟಕ ಮೂಲಕ ಜಾಗೃತಿ ಮಾಡಿಸುತ್ತಿದ್ದರು. ಕ್ರಮೇಣ ವೃತ್ತಿ ರಂಗಭೂಮಿ ಕಲಾವಿದರು ಹವ್ಯಾಸಿಗಳಾಗಿ ಕಲೆಯನ್ನು ಮುಂದುವರಿಸುತ್ತಿದ್ದಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಹಬ್ಬ – ಜಾತ್ರೆಗಳು ಬಂದಾಗ ಯುವಕರು ನಾಟಕಗಳನ್ನು ಆಡಲಾರಂಭಿಸಿದರು. ಕ್ರಮೇಣವಾಗಿ ನಾಟಕವನ್ನು ಹವ್ಯಾಸವಾಗಿ ಬಳಸತೊಡಗಿದರು. ಜಾತ್ರೆಗಳಲ್ಲಿ ಪುರುಷರೇ ಸ್ತ್ರೀ ಪಾತ್ರವನ್ನು ಮಾಡಲಾರಂಭಿಸಿದರು. ವೃತಿಯಾಗಿ ನಾಟಕವನ್ನು ನಂಬಿ ಜೀವನ ಮಾಡಲಾಗದೆ ಹವ್ಯಾಸವಾಗಿ ಮಾಡಿಕೊಂಡಿದ್ದಾರೆ. ವೃತ್ತಿ ರಂಗ ಕಲಾವಿದರನ್ನು ನಾಟಕಗಳಿಗೆ ಆಹ್ವಾನಿಸಿ ನಾಟಕವನ್ನು ಮಾಡಲಾರಂಭಿಸಿದರು. ಶಿವಕುಮಾರ ಕಲಾ ಸಂಘ ಸಾಣೇಹಳ್ಳಿ ಇವರ ವತಿಯಿಂದ ಪ್ರತಿ ವರ್ಷ ನವೆಂಬರ್ ಮಾಹೆಯ ಅಂತರ್‌ರಾಷ್ಟ್ರೀಯ ನಾಟಕೋತ್ಸವವನ್ನು ಹಮ್ಮಿಕೊಳ್ಳಲಾಗುತ್ತದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ರಚನಾ ಹವ್ಯಾಸಿ ಕಲಾ ಸಂಘ, ಸಮಸ್ತರು, ಭಾರತಿ ಕಲಾ ಸಂಘ, ನವ ತರುಣ ಕಲಾವಿದರ ಸಂಘ, ಡಾ|| ರಾಮಚಂದ್ರ ನಾಯಕರ ಗೆಳೆಯರ ಬಳಗ. ಶ್ರಮಜೀವಿ ಕಲಾತಂಡ, ಮುಂತಾದವುಗಳು ಹವ್ಯಾಸಿ ರಂಗ ಭೂಮಿಯಲ್ಲಿ ಸಕ್ರಿಯವಾಗಿರುತ್ತಾರೆ. ವೃತ್ತಿ ರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿಗಳು ಈ ಜಿಲ್ಲೆಯಲ್ಲಿ ಎರಡು ಕಣ್ಣುಗಳಂತೆ ಅಂದಿನಿಂದ ಇಂದಿನವರೆಗೆ ಚಾಲ್ತಿಯಲ್ಲಿದೆ.

ಶ್ರೀಕಾಟಮಲಿಂಗೇಶ್ವರ ನಾಟಕ ಸಂಘ, ಚಳ್ಳಕೆರೆ

ರಚನಾ ಹವ್ಯಾಸಿ ಕಲಾ ಸಂಘ, ಚಿತ್ರದುರ್ಗ

ಡಾ|| ರಾಮಚಂದ್ರ ನಾಯಕರ ಗೆಳೆಯರ ಬಳಗ, ಚಿತ್ರದುರ್ಗ

ಶ್ರಮಜೀವಿ ಕಲಾತಂಡ, ಚಿತ್ರದುರ್ಗ

ಜಮುರಾ ಕಲಾಲೋಕ, ಚಿತ್ರದುರ್ಗ

ಶಿವಕುಮಾರ ಕಲಾ ಸಂಘ, ಸಾಣೇಹಳ್ಳಿ

ತಿರುಕರಂಗ ಅನಾಥ ಸೇವಾ ಶ್ರಮ

ಭಾರತಿ ಕಲಾವಿದರು, ರಂಗ ಸೌರಭ, ಚಿತ್ರದುರ್ಗ

ಬಾಪೂ ಕಲಾ ಲೋಕ, ಪಿಳ್ಳೆಕೆರೆನಹಳ್ಳಿ

ಒಡಲಾಳ ಜನಮುಖಿ ಸಂಸ್ಥೆ, ಮೊಳಕಾಲ್ಮೂರು

ಚೈತನ್ಯ ಸಾಂಸ್ಕೃತಿಕ ಸಂಘ, ನನ್ನಿವಾಳ, ಚಳ್ಳಕೆರೆ

ಶ್ರೀಸಿರಿಸಂಪಿಗೆ ಸಾಂಸ್ಕೃತಿಕ ಸಾಮಾಜಿಕ ಶೈಕ್ಷಣಿಕ ಸಂಸ್ಥೆ (ರಿ), ಚಿತ್ರದುರ್ಗ

ಜೀವನ್ಮುಖಿ ಕಲಾ ಸಂಘ,

ರಂಗ ಸಮೂಹ.

ಬಹುಮುಖಿ, ಚಿತ್ರದುರ್ಗ.

## ಮಕ್ಕಳ ರಂಗಭೂಮಿ ಹಾಗೂ ಶಾಲಾ ಕಾಲೇಜಿನ ರಂಗ ಚಟುವಟಿಕೆಗಳು

ಚಿತ್ರದುರ್ಗ ಜಿಲ್ಲೆಯಲ್ಲಿ ಬೇಸಿಗೆ ಶಿಬಿರಗಳಲ್ಲಿ ಹಾಗೂ ರಜಾ ದಿನಗಳಂದು ಮಕ್ಕಳಿಗಾಗಿ ಅನೇಕ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅದರಲ್ಲಿ ಮುಖ್ಯವಾಗಿ ರಂಗ ಚಟುವಟಿಕೆಗಳನ್ನು ಈ ಕೆಳಕಂಡಂತೆ ನೋಡಬಹುದಾಗಿದೆ. ಶಿವಕುಮಾರ ರಂಗ ಪ್ರಯೋಗಶಾಲೆ ಸಾಣೇಹಳ್ಳಿ : ಪ್ರತಿ ವರ್ಷ ಬೇಸಿಗೆಯಲ್ಲಿ ರಂಗ ಭೂಮಿ ಪರಿಚಯವನ್ನು ಮಕ್ಕಳಿಗೆ ಮಾಡುವ ಉದ್ದೇಶದಿಂದ ವಿಶೇಷ ಬೇಸಿಗೆ ಶಿಬಿರಗಳನ್ನು ನಡೆಸಲಾಗುತ್ತದೆ ಹಾಗೂ ವಿಶೇಷ ರಂಗ ನಿರ್ದೇಶಕರನ್ನು ಕರೆತಂದು ಶಿಬಿರಗಳನ್ನು ಮಾಡಲಾಗುತ್ತದೆ.

1. **ತಿರುಕರಂಗ ಮಲ್ಲಾಡಿಹಳ್ಳಿ :** ಅನಾಥ ಸೇವಾ ಆಶ್ರಮದ ಮಕ್ಕಳಿಗಾಗಿ ವಿಶೇಷ ತರಬೇತಿಗಳನ್ನು ನೀಡಿ ಶಾಲಾ ಕಾಲೇಜು ಮಕ್ಕಳಿಂದ ಜನವರಿ ಮಾಹಿಯಲ್ಲಿ ನಾಟಕಗಳನ್ನು ತಾಲೀಮು ಮಾಡಿಸಿ, ಪ್ರದರ್ಶನ ಮಾಡಿಸಲಾಗುತ್ತಿದೆ.

2. **ಹೊಳಲ್ಕೆರೆ ತಾಲ್ಲೂಕು :** ಘಟ್ಟಿಹೊಸಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯ ಮಕ್ಕಳಿಗೆ ನಿರಂತರವಾಗಿ ರಂಗ ತರಬೇತಿ ನಡೆಯುತ್ತದೆ. ಅಲ್ಲಿನ ಪ್ರತಿಭಾ ಕಾರಂಜಿಗಳು ಸ್ಪರ್ಧೆಗಳಲ್ಲಿ ಭಾಗವಹಿಸಿರುತ್ತಾರೆ.

3. **ಗುಯಿಲಾಳು ಶಾಲೆ :** ಹಿರಿಯೂರು ತಾಲ್ಲೂಕಿನ ಗುಯಿಲಾಳು ಗ್ರಾಮದ ಜವಳಿ ಹನುಮಂತಪ್ಪ ಪ್ರೌಢಶಾಲೆಯ ಮಕ್ಕಳಿಗೆ ಶ್ರೀದಾಸೇಗೌಡ ಶಿಕ್ಷಕರು ರಂಗ ತರಬೇತಿಯನ್ನು ನೀಡಿ, ವಿಜ್ಞಾನದ ನಾಟಕಗಳನ್ನು ರಚಿಸಿ, ನಿರ್ದೇಶಿಸಿರುತ್ತಾರೆ. ಪ್ರತಿಭಾ ಕಾರಂಜಿಯಲ್ಲಿ ರಾಜ್ಯ ಮಟ್ಟದ ನಾಟಕೋತ್ಸವದಲ್ಲಿ ಇವರ ನಾಟಕ ಬಹುಮಾನ ಪಡೆದಿದೆ

4. **ಶ್ರೀಸಿರಿಸಂಪಿಗೆ ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಸಂಸ್ಥೆ (ರಿ) ಚಿತ್ರದುರ್ಗ :** ಶ್ರೀಸಿರಿಸಂಪಿಗೆ ಸಂಸ್ಥೆ ವತಿಯಿಂದ ಪ್ರತಿ ಶನಿವಾರ ಹಾಗೂ ಭಾನುವಾರ ಗಳಂದು ವಾರಾಂತ್ಯ ತರಗತಿಯಾಗಿ ರಂಗ ತರಬೇತಿಯನ್ನು ನೀಡಲಾಗುತ್ತಿದೆ. ವಿಶೇಷವಾಗಿ ರಂಗ ಚಟುವಟಿಕೆ ಪ್ರಸಾದನ, ವಿನ್ಯಾಸ, ಅಭಿನಯ ಹಾಗೂ ಮಕ್ಕಳಿಗೆ ಪಠ್ಯ ಪೂರಕ ಚಟುವಟಿಕೆಗಳನ್ನು ಮಾಡಲಾಗುತ್ತಿದೆ.

5. **ಚಿತ್ರದುರ್ಗ ಜಿಲ್ಲಾ ಬಾಲಭವನ :** ಜಿಲ್ಲಾ ಬಾಲಭವನದಲ್ಲಿ ಮಕ್ಕಳ ಬೇಸಿಗೆ ಶಿಬಿರ ಹಾಗೂ ಪ್ರತಿ ಶನಿವಾರ ಹಾಗೂ ಭಾನುವಾರ ಮಕ್ಕಳಿಗಾಗಿ ಜಿಲ್ಲಾ ಬಾಲಭವನ ಸಮಿತಿ ವತಿಯಿಂದ ರಂಗ ತರಬೇತಿಯನ್ನು ನೀಡಲಾಗುತ್ತಿದೆ ಹಾಗೂ ವಿಶೇಷವಾಗಿ ಸ್ಪರ್ಧೆಗಳಿಗೆ ತರಬೇತಿ ನೀಡಿ, ನಾಟಕ ಪ್ರದರ್ಶನವನ್ನು ಮಾಡಲಾಗುತ್ತಿದೆ ಬಾಲಭವನದಲ್ಲಿ ರಂಗ ಶಿಕ್ಷಣ ಡಿಪ್ಲೊಮ ಪಡೆದಿರುವ ಶ್ರೀಕುಮಾರ್ ಡಿ ಇವರ ನೇತೃತ್ವದಲ್ಲಿ ರಂಗ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿದೆ.

ಚಿತ್ರದುರ್ಗ ಜಿಲ್ಲೆಯ ವೈಭವ ಕುರಿತಾದ "ಚಿನ್ಮೂಲಾದ್ರಿ ಸಿರಿ" ನಾಟಕವನ್ನು ಬಾಲಭವನದ ಮಕ್ಕಳಿಗೆ ತಾಲೀಮು ಮಾಡಿಸಿ, ಅಂತರ ಜಿಲ್ಲಾ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆಯಲಾಗಿರುತ್ತದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲವು ಸಂಘ ಸಂಸ್ಥೆಗಳು ಬೇಸಿಗೆ ಶಿಬಿರಗಳಲ್ಲಿ ನೃತ್ಯ, ಸಂಗೀತದೊಂದಿಗೆ ರಂಗ ತರಬೇತಿಗಳನ್ನು ನೀಡುತ್ತಿದ್ದಾರೆ. ಅನೇಕ ರಂಗ ತಂಡಗಳು ಸಹ ತರಬೇತಿಯನ್ನು ನೀಡಿ ಮಕ್ಕಳು ರಂಗಭೂಮಿಯ ಚಟುವಟಿಕೆಗಳಿಗೆ ಜೀವ ತುಂಬುತ್ತಿವೆ.

# ಚಿತ್ರದುರ್ಗ ಜಿಲ್ಲೆಯ ಪ್ರಮುಖ ರಂಗ ಕಲಾವಿದರು

## ಶ್ರೀ ಓಬಳೇಶ್ವರ

'ಹಾಸ್ಯ ಚಕ್ರವರ್ತಿ' 'ರಂಗಸಿಂಹ'ನೆಂದೇ ಖ್ಯಾತರಾದ ಬಿದರಕೆರೆ (ಇದೀಗ ದಾವಣಗೆರೆ ಜಿಲ್ಲೆಗೆ ಸೇರುವ) ಓಬಳೇಶ್ವರ ಜಗಳೂರು ತಾಲ್ಲೂಕಿನ ಪುಟ್ಟ ಗ್ರಾಮದಿಂದ ಬಂದ ಗ್ರಾಮೀಣ ಪ್ರತಿಭೆ. ಮಾಸ್ಟರ್ ಹಿರಣ್ಣಯ್ಯ, ಬಳ್ಳಾರಿ ಲಲಿತಮ್ಮನವರ ಡ್ರಾಮಾ ಕಂಪನಿಗಳಲ್ಲಿದ್ದು ಅಭಿನಯವನ್ನು ಕರಗತ ಮಾಡಿಕೊಂಡ ಓಬಳೇಶ್ವರ ಮುಂದೆ ಸ್ವಂತ ಕಂಪನಿಯನ್ನು ಮಾಡಿದರು. ದೇವದಾಸಿ, ಮಕ್ಮಲ್ ಟೋಪಿ, ಪಂಗನಾಮ, ಎಚ್ಚಮ್ಮನಾಯಕ, ಸದಾರಮೆ ಮುಂತಾದ ನಾಟಕಗಳಲ್ಲಿ ಮಾಸ್ಟರ್ ಹಿರಣ್ಣಯ್ಯ ಮಾಡುತ್ತಿದ್ದ ಪಾತ್ರಗಳಲ್ಲಿ ತಾವು ಅಭಿನಯಿಸಿ ತಮ್ಮದೇ ಛಾಪು ತೋರಿ, ಅದರಲ್ಲೇ ವಿಭಿನ್ನತೆ ಸೃಷ್ಟಿಸಿ, ಮಾಸ್ಟರ್ ಹಿರಣ್ಣಯ್ಯನಂಥವರಿಗೇ ಸ್ಪರ್ಧೆಯೊಡ್ಡಿದ್ದು ಇಂದಿಗೆ ಇತಿಹಾಸ. ತಮ್ಮ ನಟನಾ ಚಾತುರ್ಯದ ಬಗ್ಗೆ ತುಂಬು ನಂಬಿಕೆಯಿರಿಸಿಕೊಂಡಿದ್ದ ಓಬಳೇಶ್, ತಮ್ಮ ಓಂಕಾರೇಶ್ವರ ನಾಟಕ ಸಂಘದಿಂದ 'ಖಾದಿ ಸೀರೆ', 'ಮುಂಡೇ ಮಗ', 'ವರದಕ್ಷಿಣೆ' 'ಬಸ್ ಕಂಡಕ್ಟರ್' ಮುಂತಾದ ಹೊಸ ನಾಟಕಗಳನ್ನು ರಚಿಸಿ ರಂಗಕ್ಕೆ ತಂದರು. ಅವು ಯಶಸ್ವಿಯಾಗಿ ನೂರಾರು ಪ್ರಯೋಗಗಳನ್ನು ಕಂಡು ಹಣದ ಹೊಳೆಯನ್ನೇ ಹರಿಸಿತಲ್ಲದೆ ರಾಜ್ಯಾದ್ಯಂತ ಮನೆಮಾತಾದ ಈ ರಂಗಸಿಂಹ, ನೆಟ್ಟಗೆ ಪ್ರೈಮರಿ ಶಾಲೆಯ ಓದನ್ನೇ ಓದದ, ಜೀವನಾನುಭವವನ್ನೇ ಕೃತಿಗಿಳಿಸಿದ ಸಾಹಸಿ. ವರ್ಷಗಳು ಉರುಳಿದಂತೆ ಇವರ ಕಂಪನಿ ಕೂಡ ಸೋತು ಸೊರಗಿತು.

## ಶ್ರೀ ತಿಪ್ಪನಾಯ್ಕ

ಆಹಾರ ಇಲಾಖೆಗೆ ವಿದಾಯ ಹೇಳಿ, ವಿದ್ಯುತ್ ಗುತ್ತಿಗೆ ಕಾರ್ಯಾರಾಂಭಿಸಿದ ಶ್ರೀತಿಪ್ಪನಾಯ್ಕ 1988ರಲ್ಲಿ ರಂಗಭೂಮಿಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ನವಭಾರತದ ತರುಣ ಕಲಾವಿದರ ಸಂಘ ಸ್ಥಾಪಿಸುವಲ್ಲಿ ಸಕ್ರಿಯ ಪಾತ್ರವಹಿಸಿದರು. ಇದೇ ಸಂಘದಿಂದ ಪಿ.ಸೀತಾರಾಮ ರೆಡ್ಡಿ ವಿರಚಿತ ರಾಜವೀರ ಮದಕರಿ ನಾಯಕ ನಾಟಕದಲ್ಲಿ ರಾಜವೀರ ಮದಕರಿ ನಾಯಕನ ಪಾತ್ರ ನಿರ್ವಹಿಸಿ ರಾಜ್ಯಾದ್ಯಂತ ಗಮನ ಸೆಳೆದವರು. ಮದಕರಿ ನಾಯಕನ ಪಾತ್ರಕ್ಕೆ ತಮ್ಮದೇ ಆದ ಒಂದು ಹೊಸ ರೂಪ ನೀಡಿ ಈ ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡಿ ತಾವೇ ಮದಕರಿ ನಾಯಕರಾಗುತ್ತಿದ್ದರು ಎಂಬುದನ್ನು ಈಗಲೂ ರಂಗಾ ಸಕ್ತರು ನೆನಸಿಕೊಳ್ಳುತ್ತಾರೆ. ಮೈಸೂರು

ಅರಮನೆ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಬಾರಿ ಈ ನಾಟಕ ಪ್ರದರ್ಶನಗೊಂಡಿದೆ. ಚಿತ್ರಾಂಗದ, ರಕ್ತ ರಾತ್ರಿ, ಬಡತನದ ಭೂತ, ವಿಜಯ ನಗರದ ಪತನ ಹಾಗೂ ದಳವಾಯಿ ಮುದ್ದಣ ನಾಟಕಗಳನ್ನು ಇದೇ ಸಂಘದಿಂದ ಪ್ರದರ್ಶನ ಮಾಡಿದ್ದಾರೆ. ಖ್ಯಾತ ಕಲಾವಿದೆ ಬಿ.ಸರೋಜದೇವಿರವರು ಸಹ ಈ ನಾಟಕದಲ್ಲಿ ಅಭಿನಯಿಸಿದ್ದರು

## ಶ್ರೀ ಬಿ. ಕುಮಾರಸ್ವಾಮಿ

ವೃತ್ತಿರಂಗಭೂಮಿಗೆ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಅಪರೂಪದ ಕಲಾವಿದರು ಬಿ. ಕುಮಾರಸ್ವಾಮಿಯುವರು. ಚಿತ್ರದುರ್ಗ ಸಮೀಪ ಮಠದ ಕುರುಬರಹಟ್ಟಿಯ ನಿವಾಸಿಯಾದ ಇವರು ಶ್ರೀ ಕುಮಾರೇಶ್ವರ ನಾಟಕ ಕಂಪನಿಯ ಮುಖ್ಯಸ್ಥರು. ಸುಮಾರು 40 ವರ್ಷಗಳಿಂದ ನಿರಂತರ ನಟ ಹಾಗೂ ನಿರ್ದೇಶಕ, ವ್ಯವಸ್ಥಾಪಕರಾಗಿದ್ದಾರೆ. ಯೋಗಾನರಸಿಂಹ ಇವರು ಕಲಾ ಗುರುಗಳು. ಓಬಳೇಶ್ ಇವರಿಂದ ರಂಗಭೂಮಿಯ ದೀಕ್ಷೆ ಪಡೆದಿದ್ದೇನೆ ಮತ್ತು ಅವರ ತಂಗಿಯಾದ ಸುಧಾಮಣಿಯನ್ನು ನಾನು ಮದುವೆಯಾಗಿದ್ದೇನೆ. ನನ್ನ ಇಡೀ ಕುಟುಂಬವೇ ರಂಗಭೂಮಿಗೆ ಅರ್ಪಣೆ ಎಂದು ಹೇಳುತ್ತಾರೆ. 1989ರಲ್ಲಿ ಮೈಸೂರಿನಲ್ಲಿ ಮುದುಕನ ಮದುವೆ ನಾಟಕ ಅಭಿನಯಕ್ಕೆ 'ಹಾಸ್ಯ ಚಕ್ರವರ್ತಿ' ಎಂಬ ಬಿರುದನ್ನು ನೀಡಿ, ಆನೆ ಮೇಲೆ ಮೆರವಣಿಗೆ ಮಾಡಿದ್ದು ಎಂದು ಮರೆಯಲಾಗದ ನೆನಪು ಎನ್ನುತ್ತಾರೆ. ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ನಾಟಕ 4,300 ಪ್ರದರ್ಶನ, ಮುದುಕನ ಮದುವೆ ಒಂದು ಸಾವಿರ ಮತ್ತು ರಾಜವೀರ ಮದಕರಿ ನಾಯಕ ಮೂರು ಸಾವಿರ ಯಶಸ್ವಿ ಪ್ರದರ್ಶನಗೊಂಡಿವೆ. ರಾಜ್ಯದ ಬೀದರ್, ಬೆಳಗಾವಿ ಬಿಟ್ಟು ಎಲ್ಲಾ ಜಿಲ್ಲೆಗಳಲ್ಲಿ ನಾಟಕ ಅಭಿನಯ ಮಾಡಿದ್ದಾರೆ. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ, ನಾಟಕ ಅಕಾಡೆಮಿ ಪ್ರಶಸ್ತಿ ಮತ್ತಿತರ ಪ್ರಶಸ್ತಿಗಳು ಸಂದಿವೆ.

## ಶ್ರೀ ಅಶೋಕ ಬಾದರದಿನ್ನಿ

1981ರಲ್ಲಿ ಜಿಲ್ಲೆಯ ಸಿರಿಗೆರೆ ತರಳಬಾಳು ಬೃಹನ್ಮಠ ಪ್ರವೇಶಿಸಿ ಅಲ್ಲಿ ಮರಣವೇ ಮಹಾನವಮಿ, ಶರಣ ಸತಿ ಲಿಂಗಪತಿ ನಾಟಕಗಳಿಗೆ ನಿರ್ದೇಶನ ಮಾಡಿದಾರೆ. 1998–99 ಚಿತ್ರದುರ್ಗ ಶ್ರೀಮುರುಘಾಮಠಕ್ಕೆ ಬಂದು ಜ.ಮು.ರಾ.ತಂಡದ ನಾಟಕಗಳಿಗೂ ನಿರ್ದೇಶನ ಮಾಡಿದ್ದಾರೆ. ನಾನು ಇದೇ ಜಿಲ್ಲೆಯ ಯವನಾಗಿದ್ದನೆ. ಈ ಜಿಲ್ಲೆಯೆ ನನ್ನ ಕರ್ಮಭೂಮಿ ಎನ್ನುತ್ತಾರೆ. 1977 ರಿಂದ 80ರ ವೇಳೆಗೆ ಹೊಸ ದಿಲ್ಲಿಯಲ್ಲಿ ಡಿಪ್ಲೊಮ ಇನ್ – ಡ್ಯಾನ್ಸ್ ಡ್ರಾಮ ಪದವಿ ಪಡೆದು, ಅಲ್ಲಿಂದ ಬಿ.ವಿ. ಕಾರಂತರ ಬೆಂಗಳೂರಿನ ಬೆನಕ ರಂಗ ತಂಡಕ್ಕೆ ಸೇರಿ ಅಲ್ಲಿ ನಾಟಕವನ್ನು ನಿರ್ದೇಶಿಸಿದರು. ಬೆಂಗಳೂರು, ಕೋಲಾರ, ಮೈಸೂರು, ಮಾಲೂರು, ಬಾಗಲಕೋಟೆ, ಇಳ್ಕಲ್ ಹೀಗೆ ರಾಜ್ಯದಲ್ಲಿ ಸುತ್ತಾಟ ಮಾಡಿರುವ ಇವರಿಗೆ ಅಪಾರ ರಂಗ ಪಾಂಡಿತ್ಯ ಇದೆ. 2007 ರಲ್ಲಿ ಚಿತ್ರದುರ್ಗ ಜಿಲ್ಲೆಯ ಸಾಣೆಹಳ್ಳಿಯ

ಶಿವಕುಮಾರ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗಿದೆ. ನಾಟಕ ಅಕಾಡೆಮಿ ಪ್ರಶಸ್ತಿ 1990 ರಲ್ಲಿ ಪಡೆದಿದ್ದಾರೆ. ಚಿತ್ರದುರ್ಗದ ಬಾಪೂ ವಿದ್ಯಾ ಸಂಸ್ಥೆಯಲ್ಲಿ ಸಾಂಸ್ಕೃತಿಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

## ಶ್ರೀ ಪಿ. ತಿಪ್ಪೇಸ್ವಾಮಿ

ಚಳ್ಳಕೆರೆ ಶ್ರೀ ಪಿ. ತಿಪ್ಪೇಸ್ವಾಮಿಯವರು ರಂಗಸಂಗೀತ, ನಿರ್ದೇಶನ, ರಂಗ ಸಂಘಟಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 1975ರಲ್ಲಿ ಶ್ರೀಕಾಟಮಲಿಂಗೇಶ್ವರ ನಾಟಕ ಸಂಘವನ್ನು ಕಟ್ಟಿ ರಂಗಯಾತ್ರೆಯನ್ನು ಪ್ರಾರಂಭಿಸಿದರು. ಪೌರಾಣಿಕ, ಐತಿಹಾಸಿಕ ನಾಟಕಗಳಲ್ಲಿ ಸಂಗೀತ ನಿರ್ದೇಶನ ಮಾಡಿರುತ್ತಾರೆ. ನಿವೃತ್ತ ಶಿಕ್ಷಕರಾಗಿರುವ ಇವರಿಗೆ ಅನೇಕ ಸಂಘ ಸಂಸ್ಥೆಗಳು ಗೌರವಿಸಿವೆ, ಅನೇಕ ನಾಟಕಗಳ, ಸ್ಪರ್ಧೆಗಳಿಗೆ ತೀರ್ಪುಗಾರರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ತಂದೆ ಯಕ್ಷಗಾನ ಕಲಾವಿದರಾಗಿದ್ದರಿಂದ ಹಳ್ಳಿಗಳಲ್ಲಿ ಪೌರಾಣಿಕ ನಾಟಕ ಯಕ್ಷಗಾನಗಳನ್ನು ಆಡಿಸುತ್ತಿದ್ದರು. ಇದೇ ಇವರಿಗೆ ಸ್ಫೂರ್ತಿ. ಹಾರ್ಮೋನಿಯಂ, ಕ್ಯಾಷಿಯೊ ಸಹ ಕಲಿತಿದ್ದು, ಸಂಗೀತದಲ್ಲಿ ವಿವಿಧ ಪ್ರಯೋಗಗಳನ್ನು ಮಾಡಿರುತ್ತಾರೆ.

ರಂಗ ತರಬೇತಿಗಳನ್ನು ಸಹ ಮಾಡಿರುತ್ತಾರೆ. ಹವ್ಯಾಸಿ ರಂಗ ಕಲಾವಿದರ ತಂಡ ರಚಿಸಿಕೊಂಡು ಸಂಗೀತ ನಿರ್ದೇಶನ, ನೇಪಥ್ಯ ಕುರಿತಂತೆ ಹಲವು ಬಗೆಯ ತರಬೇತಿಗಳನ್ನು ಮಾಡಿರುತ್ತಾರೆ. ಕುರುಕ್ಷೇತ್ರ, ಚಕ್ರವ್ಯೂಹ, ಸಂಪೂರ್ಣ ರಾಮಾಯಣ, ಮಹಾಭಾರತ, ನಾಟಕಗಳನ್ನು ನಿರ್ದೇಶಿಸಿದ್ದಾರೆ. ರಾಜ ವೀರ ಮದಕರಿ ನಾಯಕ ಹೆಚ್ಚು ಪ್ರದರ್ಶನಗೊಂಡ ನಾಟಕವಾಗಿವೆ. ಪ್ರಸ್ತುತ ಕರ್ನಾಟಕ ನಾಟಕ ಅಕಾಡೆಮಿ, ಚಿತ್ರದುರ್ಗ ಜಿಲ್ಲೆಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಶಕ್ತ ಕಲಾವಿದರಿಗೆ ಏನಾದರೂ ಸಹಾಯ ಮಾಡಲು "ರಂಗ ಪರಿಷತ್" ಹುಟ್ಟಿಹಾಕಬೇಕೆನ್ನುವ ಬಯಕೆ ಇವರದಾಗಿದೆ.

## ಶ್ರೀ ಸಿ.ಜಿ. ಕೃಷ್ಣಸ್ವಾಮಿ

ಸಿಜಿಕೆಯವರು ಮೂಲತಃ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ನಗರದವರು. ಬೆಂಗಳೂರಿನ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದ ಪ್ರೊಫೆಸರ್ ಆಗಿದ್ದ ಸಿ.ಜಿ.ಕೃಷ್ಣಸ್ವಾಮಿಯವರು ಸಂಪೂರ್ಣವಾಗಿ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದರು. ಸಿಜಿಕೆಗೂ ಸಾಣೇಹಳ್ಳಿಗೂ ಅವಿನಾಭಾವ ಸಂಬಂಧ. 1997ರಲ್ಲಿ 'ಶಿವಸಂಚಾರ' ಎಂಬ ಅಪ್ಪಟ ಗ್ರಾಮೀಣ ರೆಪರ್ಟರಿಯನ್ನು ಸಾಣೇಹಳ್ಳಿಯ ಕಲಾಸಂಘದಿಂದ ಆರಂಭಿಸಿದ್ದಾರೆ, ಇಡೀ ಹಳ್ಳಿಗಾಡಿನ ಜನರನ್ನು ಕಟ್ಟಿಕೊಂಡು, ಶ್ರೀಗಳ ಜೊತೆ ಚರ್ಚಿಸಿ 5 ಸಾವಿರಕ್ಕೂ ಹೆಚ್ಚು ಜನರು ಕುಳಿತು ನೋಡಬಹುದಾದ ಗ್ರೀಕ್ ಮಾದರಿಯ ಬಯಲು ರಂಗಮಂದಿರವನ್ನು ನಿರ್ಮಿಸಿ, ಭಾರತದ ರಂಗ ಭೂಪಟದಲ್ಲಿ ಸಾಣೇಹಳ್ಳಿಗೆ ಜಾಗ ಕಲ್ಪಿಸಿಕೊಡುವ ಮೂಲಕ ಗ್ರಾಮೀಣ ರಂಗಭೂಮಿಗೊಂದು ಹೊಸ ಭಾಷ್ಯ ಬರೆದವರು ಸಿಜಿಕೆ. ಕನ್ನಡ ರಂಗಭೂಮಿಯಲ್ಲಿ ತಮ್ಮದೇ ಆದ ಮಾರ್ಗ ಸೃಷ್ಟಿಸಿಕೊಂಡಿದ್ದ ಸಿಜಿಕೆ 'ಸಮುದಾಯ' ಸಂಘಟನೆಯನ್ನು ರೂಪಿಸಿದ ಪ್ರಮುಖರಲ್ಲಿ ಒಬ್ಬರು. ಮೂರು ದಶಕಗಳಿಗೂ ಹೆಚ್ಚುಕಾಲ ತಮ್ಮ ಸಂಘಟನಾ

ಸಾಮರ್ಥ್ಯದಿಂದ ಯುವ ಪೀಳಿಗೆಯನ್ನು ರಂಗಭೂಮಿಯ ಕಡೆಗೆ ಆಕರ್ಷಿಸಿ, ರಂಗಭೂಮಿಯನ್ನು ನಿಂತ ನೀರಾಗಲು ಬಿಡದೆ ಹೊಸಹೊಸ ನೀರಿನ ಒರತೆಗಳನ್ನು ಸೃಷ್ಟಿಸಿದರು. ಅಪಾರ ಸಂಖ್ಯೆಯ ಯುವಕರು ಇವರಿಂದ ಆಕರ್ಷಿತರಾಗಿ ರಂಗಭೂಮಿಯಲ್ಲಿ ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿರುವುದು ಅದಕ್ಕೆ ಸಾಕ್ಷಿ. 'ಸಮುದಾಯ', 'ರಂಗನಿರಂತರ', 'ರಂಗಸಂಪದ' ಮುಂತಾದ ರಂಗ ಸಂಘಟನೆಗಳನ್ನು ಸಂಪದ್ಭರಿತಗೊಳಿಸಲು ಶ್ರಮಿಸಿದ್ದಾರೆ. ಅವರ ನಾಟಕಗಳ ಮೂಲಕ ಹೊಸ ನಟ – ನಟಿಯರು ತಮ್ಮ ಅಭಿವ್ಯಕ್ತಿಯನ್ನು ಕಂಡುಕೊಂಡರು. ಒಡಲಾಳ, ಬೆಲ್ಚಿ, ಒಥೆಲೋ, ಪತ್ರೆ ಸಂಗಪ್ಪನ ಕೊಲೆ, ಮಹಾಚೈತ್ರ, ಜೂಲಿಯಸ್ ಸೀಜರ್ ಮುಂತಾದ ವೈವಿಧ್ಯಮಯ ರಂಗಕೃತಿಗಳನ್ನು ನಿರ್ದೇಶಿಸಿದ್ದಾರೆ. ಅವರೀಗ ನೆನಪು ಮಾತ್ರ.

### ಡಾ. ರಾಮಚಂದ್ರ ನಾಯಕ

1960ರಲ್ಲಿ ಮೆಡಿಕಲ್ ಕಾಲೇಜ್ ಸೇರಿ 1966ರಲ್ಲಿ ಎಂ.ಬಿ.ಬಿ.ಎಸ್. ಪದವಿ ಪಡೆದು 1974ರಲ್ಲಿ ಎಂ.ಎಸ್. ಪದವಿಯನ್ನು ಪಡೆದುಕೊಂಡು ವೃತಿಯಲ್ಲಿ ವೈದ್ಯರಾಗಿಸೇವೆ ಸಲ್ಲಿಸುತ್ತಾ ಪ್ರವೃತಿಯಲ್ಲಿ ರಂಗಕಲಾವಿದರಾಗಿ ಹೆಸರಾದವರು ಡಾ. ರಾಮಚಂದ್ರ ನಾಯಕರವರು, ಮದಕರಿನಾಯಕ ನಾಟಕದ ಕಾಮರಾಜ, ದೊಡ್ಡೇರಿ ಮದಕರಿ ನಾಯಕ ದುರ್ಗಾಸ್ತಮಾನದ ವೀರಭದ್ರನಾಗಿ, ನಾಯಕನಹಟ್ಟಿ ತಿಪ್ಪೆರುದ್ರಸ್ವಾಮಿ ನಾಟಕದಲ್ಲಿ ಭುಜಂಗನ ಪಾತ್ರ, ದಳವಾಯಿ ಮುದ್ದಣ ನಾಟಕದಲ್ಲಿ ಮುಖ್ಯ ಪಾತ್ರ ವಹಿಸಿರುತ್ತಾರೆ. ಕುರುಕ್ಷೇತ್ರ ನಾಟಕದಲ್ಲಿ ದುಶ್ಯಾಸನ ಪಾತ್ರಕ್ಕೆ ಜೀವ ತುಂಬಿದ ಉತ್ತಮ ರಂಗ ಕಲಾವಿದರು. ಗೋಪಿ ಕಲ್ಯಾಣ ಎಂಬ ಚಲನಚಿತ್ರದಲ್ಲಿ ಅಭಿನಯ ಮಾಡಿರುತ್ತಾರೆ. ಜಿಲ್ಲೆಯ ಕಾದಂಬರಿಗಳಾದ ಹರತಿಸಿರಿ, ಗಿರಿ ಮಲ್ಲಿಗೆ, ದುರ್ಗದ ದವಳ ಕೀರ್ತಿ, ದುರ್ಗಾಸ್ತಮಾನ ಗಂಡುಗಲಿ ಮದಕರಿ ನಾಯಕ, ಬಿಚ್ಚುಗತ್ತಿ ಭರಮಣ್ಣ ನಾಯಕ, ಮ್ಯಾಸಭೇಡರ ಸಂಸ್ಕತಿ ಮುಂತಾದವುಗಳ ಕುರಿತು ರೂಪಕ, ನಾಟಕಗಳನ್ನು ಮಾಡಿದ್ದಾರೆ. ಜನಪದ ವೀರ ಪರಂಪರೆಯನ್ನು ಪ್ರತಿಬಿಂಬಿಸುವ ಕೆಲಸ ಮಾಡಿದ್ದಾರೆ, ಜಿಲ್ಲಾ ನಾಟಕ ಸಂಘಗಳ ಒಕ್ಕೂಟದ ಪ್ರಥಮ ಅಧ್ಯಕ್ಷರಾಗಿ ಜಿಲ್ಲಾ ರಂಗಮಂದಿರ ನಿರ್ಮಾಣಕ್ಕಾಗಿ ಶ್ರಮಿಸಿದ್ದಾರೆ. ಹಾಗೆಯೆ ಅನೇಕ ಕಲಾವಿದರಿಗೆ ಸಹಾಯ ಮಾಡಿದ್ದಾರೆ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ಮತ್ತು ಶ್ರೀ ಶಿವಲಿಂಗಾನಂದ ಸ್ವಾಮೀಜಿಯವರು ದಳವಾಯಿ ಮುದ್ದಣ್ಣ ನಾಟಕವನ್ನು ರಂಗಮಂದಿರದಲ್ಲಿ 3 ಗಂಟೆಯ ಕಾಲ ವೀಕ್ಷಣೆಮಾಡಿ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.

### ಶ್ರೀ ಮೌನೇಶ್ವರಚಾರ್

1974 ರಿಂದ 1982ರ ವರೆಗೆ ತರಳಬಾಳು ಕಲಾ ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ದೇಶದ ನಾನಾ ರಾಜ್ಯಗಳಲ್ಲಿ ಹಾಗೂ ನೇಪಾಳದ ಕಠ್ಮಂಡುನಲ್ಲಿಯೂ ಅನೇಕ ನಾಟಕಗಳನ್ನು ಪ್ರದರ್ಶನ ಮಾಡಿರುತ್ತಾರೆ. 'ನ್ಯಾಯದ ಬಾಗಿಲಲ್ಲಿ', 'ಸಾಕ್ಷಿಕಲ್ಲು',

'ಮರಣವೇ ಮಹಾನವಮಿ', ತಲೆದಂಡ, ಜಲಗಾರ ಹೀಗೆ ಹಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸಾಯೋ ಆಟ, ಜಾತ್ರೆ, ಚಾರ್ವಾಕ, ಕಿತ್ತೂರು ಚೆನ್ನಮ್ಮ, ಕೆರೆಗೆ ಹಾರು, ಸಾಕ್ಷಿಕಲ್ಲು ಮೊದಲಾದ ನಾಟಕಗಳನ್ನು ನಿರ್ದೇಶಿಸಿದ್ದಾರೆ ಹಲವು ರಂಗ ತರಬೇತಿ ಶಿಬಿರಗಳನ್ನು ನಡೆಸಿದ್ದಾರೆ. 1974ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪುರಸ್ಕಾರ, ತರಳಬಾಳು ವಿದ್ಯಾ ಸಂಸ್ಥೆಯ ಕಲಾ ನೈಪುಣ್ಯ ಅಭಿನಯ ಚಾತುರ್ಯ ಪ್ರಶಸ್ತಿ. ನಾಟಕ ನಿರ್ದೇಶನ ಮತ್ತು ಅಭಿನಯಕ್ಕೆ ಉತ್ತಮ ನಟ ಪ್ರಶಸ್ತಿ, ಅಖಿಲ ಕರ್ನಾಟಕ ನಾಟಕ ಸ್ಪರ್ಧೆಯಲ್ಲಿ ಅಳಿಯ ರಾಮರಾಯ ನಾಟಕದ ರಾಮರಾಯ ಪಾತ್ರಕ್ಕೆ ಉತ್ತಮ ನಟ ಪ್ರಶಸ್ತಿ ಲಭಿಸಿದೆ. ರಂಗಭೂಮಿಗೆ ಸಲ್ಲಿಸಿರುವ ಅವರ ಸೇವೆ ಪರಿಗಣಿಸಿ ಸರ್ಕಾರ ನಾಟಕ ಅಕಾಡೆಮಿ ಸದಸ್ಯರಾಗಿ ನೇಮಿಸಿತ್ತು.

### ಶ್ರೀ ಸೂರಯ್ಯ ಎಸ್.ಕೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಪಟ್ಟಣದ ವಾಸಿಯಾಗಿರುವ ಸೂರಯ್ಯ ರವರು ವೃತ್ತಿಗಾಗಿ ಕಾಟಮ ಲಿಂಗೇಶ್ವರ ಖಾಸಗಿ ಪ್ರೌಢಶಾಲೆಯಲ್ಲಿ ಲ್ಯಾಬ್ ಅಟೆಂಡರ್‌ರಾಗಿ ಕೆಲಸ ನಿರ್ವಹಿಸುವ ಜೊತೆಗೆ ಶ್ರೇಷ್ಠ ರಂಗ ಕಲಾವಿದ. ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ತಿಪ್ಪೇಸ್ವಾಮಿ ಮತ್ತು ಸಂಗೀತ ವಿದ್ವಾಂಸ ಬಿ.ಗುರುಸಿದ್ದಪ್ಪ ಅವರ ಗರಡಿಯಲ್ಲಿ ಪಳಗಿರುವ ಸೂರಯ್ಯ ಅವರು ಒಂದು ರೀತಿಯಲ್ಲಿ ಸೃಜನಶೀಲರಾಗಿ ರಂಗ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡಿಸಿದ್ದಾರೆ. ಚಿಕ್ಕಂದಿನಿಂದಲೇ ರಂಗಾಸಕ್ತಿಯಿಂದ ಬಯಲಾಟ, ಕೋಲಾಟ, ಭಜನೆಗಳನ್ನು ಮಾಡುತ್ತಿದ್ದು, ರಾಜವೀರ ಮದಕರಿ ನಾಯಕ ನಾಟಕ ಪ್ರದರ್ಶನ ಸಂದರ್ಭದಲ್ಲಿ ಯಾರಾದರೂ ಸ್ತ್ರೀ ಪಾತ್ರದಾರಿಗಳು ಇರದ್ದಿದ್ದರೆ ಸೂರಯ್ಯ ಅವರ ಪತ್ನಿ ಹೆಣ್ಣು ಮಕ್ಕಳು ಹಾಗೂ ಅವರ ಕುಟುಂಬ ಇಡೀ ನಾಟಕದ ಪಾತ್ರವನ್ನು ನಿರ್ವಹಿಸುತ್ತಾರೆ. ನಾರಾಯಣಿ, ಕಲಿಯುಗದ ಕನ್ಯೆ, ಆಶಾಲತಾ, ಮುಡಿದ ಮಲ್ಲಿಗೆ, ಭಕ್ತಸುದನ್ಯ, ಸೀತಾ ರಾಮ, ಚಕ್ರವ್ಯೂಹ, ದಳವಾಯಿ ಮುದ್ದಣ್ಣ, ಮಾಸಬೇಡ ಬುಡಕಟ್ಟು ಸಾಂಸ್ಕೃತಿಕ ವೀರರಾದ ಗಾದ್ರಿ ಪಾಲನಾಯಕ ಮುಂತಾದ ವೀರರ ಸಾಹಸದ ಕತೆ ಕುರಿತ ನೂರು ನಾಟಕಗಳ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಮೈಸೂರು ದಸರಾ ಜಿಲ್ಲಾ ನಾಟಕೋತ್ಸವ 75ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಹಂಪಿ ಉತ್ಸವ, ದುರ್ಗೋತ್ಸವ ಇತರೆ ಕಾರ್ಯಕ್ರಮಗಳಲ್ಲಿ ಅವರಿಗೆ ಗೌರವಿಸಿಲಾಗಿದೆ.

### ಶ್ರೀ ವೆಂಕಟರಮಣಪ್ಪ

ಚಳ್ಳಕೆರೆಯ ವೆಂಕಟರಮಣಪ್ಪ ನವರು ಶ್ರೀಕಾಟಲಿಂಗೇಶ್ವರ ನಾಟಕ ಸಂಘದ ಪಿ.ತಿಪ್ಪೆಸ್ವಾಮಿ ಹಾಗೂ ಸೂರನಾಯಕ ರವರ ಗರಡಿಯಲ್ಲಿ ಪಳಗಿರುವ ಇವರಿಗೆ ಕನ್ನಡ, ತೆಲುಗು ಭಾಷೆಗಳು ಸಂಪೂರ್ಣ ಹಿಡಿತದಲ್ಲಿವೆ. ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಹಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ರಾಜವೀರ ಮದಕರಿ ನಾಯಕ, ಬಸ್ ಕಂಡಕ್ಟರ್, ಮುದುಕನ ಮದುವೆ, ಆಶಾಲತಾ ಮತ್ತು ತಿಮ್ಮಣ್ಣ ನಾಯಕ, ದುರ್ಗಸಿಂಹ ಲಂಚಾಮೃತ

ನಾಟಕಗಳಲ್ಲಿ ನಾಯಕ ಮತ್ತು ಖಳನಾಯಕನಾಗಿ ಅಭಿನಯಿಸಿರುತ್ತಾರೆ. ಖ್ಯಾತ ಚಿತ್ರನಟಿ ಶ್ರೀಮತಿ ಉಮಾಶ್ರೀ, ನಟ ದಿ॥ ದೀರೇಂದ್ರ ಗೋಪಾಲ್ ಮುಂತಾದವರ ಜೊತೆ ಅಭಿನಯಿಸಿದ್ದಾರೆ. ಜಿಲ್ಲಾ ಉತ್ಸವ, ದುರ್ಗೋತ್ಸವ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳ ನಾಟಕಗಳಲ್ಲಿ ಅಭಿನಯಿಸಿದ್ದಾರೆ ಹಾಗೂ ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದಾರೆ.

## ಶ್ರೀ ಗುರುರಾವ್

ಪ್ರಖ್ಯಾತ ರಂಗಭೂಮಿ ಕಲಾವಿದ ದಿ॥ಸುಬ್ಬಯ್ಯ ನಾಯ್ಡು ಅವರ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯಲ್ಲಿ 1952 ರಿಂದ 1954ರ ವರೆಗೆ ಅಭಿನಯಿಸಿರುತ್ತಾರೆ. ಪ್ರಖ್ಯಾತ ಕಲಾವಿದರ ಸಂಸ್ಥೆಯಿಂದ ಕಾಲು ಶತಮಾನ ಕಾಲ ಮುಖ್ಯಪಾತ್ರದಲ್ಲಿ ನಟಿಸಿದರು. ರಾಜ್ಯದಲ್ಲಿ ಮೊಟ್ಟ ಮೊದಲ ಭಾರಿಗೆ ಪ್ರದರ್ಶಿಸಿದ ಧ್ವನಿ ಬೆಳಕಿನ ಶ್ರೀಕೃಷ್ಣದೇವರಾಯ ನಾಟಕದಲ್ಲಿ ಶ್ರೀಕೃಷ್ಣದೇವರಾಯನ ಪಾತ್ರದಲ್ಲಿ ಅಭಿನಯಿಸಿ ಅದ್ಭುತ ಯಶಸ್ಸು ಕಂಡಿದ್ದರು. ಭಕ್ತ ಅಂಬರೀಶ, ಕೃಷ್ಣಲೀಲೆ, ಸಂಪೂರ್ಣ ರಾಮಾಯಣ, ಶ್ರೀಕೃಷ್ಣ ಗಾರುಡಿ, ಚಂದ್ರ ಚಕೋರಿ, ಕುರುಕ್ಷೇತ್ರ, ಧರ್ಮಭೂಮಿ, ಶ್ರೀಕೃಷ್ಣದೇವರಾಯ, ಕಲಿಕಂಠೀರವ ಹೀಗೆ ಇವರ ಅಭಿನಯದ ಅನೇಕ ನಾಟಕಗಳು ಅಪಾರ ಜನ ಮೆಚ್ಚುಗೆ ಗಳಿಸಿದೆ.

ಕನ್ನಡದ ಅನೇಕ ಚಲನಚಿತ್ರಗಳಲ್ಲಿ ಪೋಷಕ ನಟರಾಗಿ ಅಭಿನಯಿಸಿದ್ದಾರೆ. ಧಾರಾವಾಹಿ ಮತ್ತು ಇಂಗ್ಲಿಷ್ ಚಲನಚಿತ್ರಗಳಲ್ಲಿ ಅಬಿನಯಿಸಿದ್ದಾರೆ. 1ನೇ ನವೆಂಬರ್ 2003 ರಂದು ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ರಾಜ್ಯೋತ್ಸವ ಪ್ರಶಸ್ತಿಯನ್ನು ಮಾನ್ಯ ಮುಖ್ಯ ಮಂತ್ರಿಗಳಾದ ಎಸ್.ಎಂ, ಕೃಷ್ಣ ಇವರಿಂದ ಸ್ವೀಕರಿಸಿರುತ್ತಾರೆ.

## ಪರಮೇನಹಳ್ಳಿಯ ಪಟೇಲ್ ಶ್ರೀ ತಿಪ್ಪೇಸ್ವಾಮಿ

ಪರಮೇನಹಳ್ಳಿ ತಿಪ್ಪೇಸ್ವಾಮಿಯವರು ಅನೇಕ ನಾಟಕ ಕಂಪನಿಗಳಲ್ಲಿ ಅಭಿನಯಿಸಿರುತ್ತಾರೆ. ಸೊಂಡೆಕೆರೆಯ ಮಂಜನಾಥೇಶ್ವರ ನಾಟಕ ಸಂಘ, ಧಾರವಾಡ ಜಿಲ್ಲೆಯ ನರೇಗಲ್‌ನ ಯಡಿಯೂರು ಸಿದ್ಧಲಿಂಗೇಶ್ವರ ನಾಟಕ ಸಂಘ, ದಾವಣಗೆರೆಯ ಜಯಲಕ್ಷ್ಮಿ ನಾಟಕ ಸಂಘ, ಚಿತ್ರದುರ್ಗ ಕುಮಾರೇಶ್ವರ ನಾಟಕ ಸಂಘ, ಕೆ,ಬಿ,ಅರ್. ಡ್ರಾಮ ಕಂಪನಿ, ಗುಬ್ಬಿಕಂಪನಿ ಚೆನ್ನಬಸವೇಶ್ವರ ನಾಟಕ ಸಂಘ, ವಿಶ್ವಭಾರತಿ ಕಲಾ ಸಂಘ ಹೀಗೆ ಅನೇಕ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ.

ಐತಿಹಾಸಿಕ, ಸಾಮಾಜಿಕ, ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಿದ್ದು, ರೇಣುಕಾ ಮಹಾತ್ಮೆ, ಮೈಸೂರುಹುಲಿ ಟಿಪ್ಪು ಸುಲ್ತಾನ್, ಸಂತ ಶಿಶುನಾಳ ಶರೀಫ, ಮುಂಡೇ ಮಗ, ಧರ್ಮದೇವತೆ ಮುಂತಾದ ನಾಟಕಗಳಲ್ಲಿ ಅಭಿನಯಿಸಿ ಗಮನ ಸೆಳೆದರು. ಧೀರೇಂದ್ರ ಗೋಪಾಲ್, ಸುದೀರ್ ಜೊತೆ ನಾಟಕಗಳಲ್ಲಿ ಅಭಿನಯ ಮಾಡಿದ್ದಾರೆ,

ಬರಗೂರು ರಾಮಚಂದ್ರಪ್ಪ ನಿರ್ದೇಶನದ ಶಬರಿ ಚಲನಚಿತ್ರದಲ್ಲಿ ತಳವಾರ ನಾಯಕನ ಪಾತ್ರದಲ್ಲಿ ಅಭಿನಯಿಸಿದ್ದಾರೆ.

**ಬಿದರಕೆರೆ ಸುಬಾನ್‌ಸಾಬ್**

ಚಿತ್ರದುರ್ಗ ನಗರದ ವಾಸಿಯಾಗಿರುವ ಇವರು ಶ್ರಮಜೀವಿ ಕಲಾ ಸಂಘ ಸ್ಥಾಪಿಸಿ ಅನೇಕ ನಾಟಕಗಳನ್ನು ನಿರ್ದೇಶಿಸಿ ಅಭಿನಯಿಸಿದ್ದಾರೆ. ಬಂಡೆದ್ದವರ ಬದುಕು, ಖಾದಿಸೀರೆ, ಮುಂಡೇ ಮಗ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಹೆಸರಾಂತ ರಂಗ ಕಲಾವಿದ ದಿ॥ ದಿನೇಶ್ ಹಾಗೂ ಧೀರೇಂದ್ರ ಗೋಪಾಲ್,ಸಿ.ಅರ್.ಸಿಂಹ, ಎನ್.ಎಸ್.ರಾವ್, ಮುಂತಾದ ನಟರೊಂದಿಗೆ ಪಾತ್ರ ಮಾಡಿರುತ್ತಾರೆ. ರಾಮಾಯಣ, ಕುರಾನ್, ಮಹಾಭಾರತದ ದೊಂದಿಗೆ ಅವಧೂತರ ಬಗ್ಗೆ ಅಪಾರವಾದ ಜ್ಞಾನವನ್ನು ಹೊಂದಿದ್ದಾರೆ. ಸ್ಥಳದಲ್ಲಿ ಜಾಗೃತಿ ಗೀತೆಗಳನ್ನು ರಚಿಸಿ ಹಾಡಬಲ್ಲವರಾದ ಇವರು ಅನೇಕ ನಾಟಕಗಳನ್ನು ರಚಿಸಿದ್ದಾರೆ. ನಾಟಕದ ಆಸಕ್ತಿಯಿಂದ, ನಾಟಕದಲ್ಲೆ ಬದುಕನ್ನು ಸವಿಸಿದ ಹಿರಿಯ ಚೇತನ ಬಿದರಕೆರೆ ಸುಬಾನ್ ಸಾಬ್‌ರವರು.

**ಶ್ರೀ ನಾಗರಾಜ ಕೆ.**

ಚಿತ್ರದುರ್ಗ ನಗರದ ವಾಸಿಯಾಗಿರುವ ಇವರು ಐತಿಹಾಸಿಕ ಮತ್ತು ಸಾಮಾಜಿಕ ಹಲವು ನಾಟಕಗಳಲ್ಲಿ ರಾಜ್ಯಾದ್ಯಂತ್ಯದಲ್ಲಿ ಅಭಿನಯಿಸಿದ್ದಾರೆ. ರಾಜಾವೀರ ಮದಕರಿ ನಾಯಕ ನಾಟಕದಲ್ಲಿ ಮುಖ್ಯಪಾತ್ರದಲ್ಲಿ ಅಬಿನಯಿಸಿದ್ದಾರೆ, ರಂಗ ಸಂಘಟಕರಾಗಿ ಸೇವೆ ಸಲ್ಲಿಸಿದ್ದಾರೆ ಹಾಗೂ ಕರ್ನಾಟಕ ಅಕಾಡೆಮಿಯಿಂದ ಚಿತ್ರದುರ್ಗ ಜಿಲ್ಲೆಯ ಮಾಜಿ ಸದಸ್ಯರಾಗಿರುತ್ತಾರೆ. ಇವರಿಗೆ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿವೆ ಹಾಗೂ ಗೌರವಿಸಿವೆ.

**ಶ್ರೀ ಹೊನ್ನೂರಪ್ಪ**

ಶ್ರಮಜೀವಿ ಕಲಾ ತಂಡದಲ್ಲಿ ಉತ್ತಮ ನಟರಾಗಿ, ಬಂಡೆದ್ದವರ ಬದುಕು, ಖಾದಿಸೀರೆ, ಮುಂಡೇ ಮಗ, ಮುದುಕನ ಮದುವೆ, ಆಶಾಲತಾ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಡೋಲಕ್ ಕಲಾವಿದರಾಗಿ ರಂಗ ಭೂಮಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಹೆಸರಾಂತ ನಟರೊಂದಿಗೆ ಅಭಿನಯ ಮಾಡಿದ್ದಾರೆ. ಹಲವಾರು ಸಂಘ ಸಂಸ್ಥೆಗಳ ನಾಟಕಗಳಲ್ಲಿ ಅಭಿನಯಿಸಿದ್ದಾರೆ ಹಾಗೂ ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನಿತರಾಗಿದ್ದಾರೆ.

**ಶ್ರೀ ತಿಪ್ಪೇಸ್ವಾಮಿ ರಚನಾ**

ರಚನಾ ಹವ್ಯಾಸಿ ಕಲಾಸಂಘದ ಅಧ್ಯಕ್ಷರಾಗಿ ರಂಗ ಸಂಘಟಕರಾಗಿ, ರಂಗ ನಿರ್ದೇಶಕರಾಗಿ ಅನೇಕ ನಾಟಕ ಗಳನ್ನು ನಿರ್ದೇಶನ ಮಾಡಿದ್ದಾರೆ, ವೃತಿಯಲ್ಲಿ ಆರೋಗ್ಯ ಇಲಾಖೆಯಲ್ಲಿದ್ದ ಇವರು ಹೆಸರಾಂತ ರಂಗನಿರ್ದೇಶಕರಾದ ಎಲ್. ಕೃಷ್ಣಪ್ಪ, ಗೋಪಾಲಕೃಷ್ಣ

ನಾಯರಿ, ಅಶೋಕ ಬಾದರದಿನ್ನಿ, ಸಾಂಬಶಿವ ದಳವಾಯಿ, ಮುಂತಾದವರೊಂದಿಗೆ ಒಡನಾಟ ಇದ್ದವರಾಗಿದ್ದಾರೆ.

### ಶ್ರೀ ಎಂ.ಸಿ. ಮಂಜುನಾಥ

ರಚನಾ ಹವ್ಯಾಸಿ ಕಲಾಸಂಘ ದಕಾರ್ಯದರ್ಶಿಯಾದ ಇವರು ಅನೇಕ ನಾಟಕ ಗಳಲ್ಲಿ ಅಭಿನಯ ಮಾಡಿದ್ದಾರೆ. ಇವರು ಹೆಸರಾಂತ ರಂಗ ನಿರ್ದೇಶಕರಾದ. ಭಾರತಿ, ಮಂಜುಳ ಬಾದಾಮಿ, ಎಲ್. ಕೃಷ್ಣಪ್ಪ, ಗೋಪಾಲಕೃಷ್ಣ ನಾಯರಿ, ಅಶೋಕ ಬಾದರದಿನ್ನಿ, ಸಾಂಬಶಿವ ದಳವಾಯಿ, ಮುಂತಾದ ರಂಗ ನಿರ್ದೇಶನದಲ್ಲಿ. ಕೋಟು, ಕೋತ್ವಾಲನ ಪ್ರೇಮಪ್ರಸಂಗ, ಜೈಸಿದ್ದ ನಾಯ್ಕ, ಹಳ್ಳಿ ಚಿತ್ರ, ಒಂದು ಸಾವಿನ ಸುತ್ತ, ಸಾಕ್ರಟೀಸ್, ಮುಂತಾದ ನಾಟಕದಲ್ಲಿ ಮುಖ್ಯಪಾತ್ರದಲ್ಲಿ ರಾಜ್ಯದ ಅನೇಕ ಕಡೆಗಳಲ್ಲಿ ಅಭಿನಯ ಮಾಡಿದ್ದಾರೆ. ಅನೇಕಸಂಘ ಸಂಸ್ಥೆಗಳು ಸನ್ಮಾನಿಸಿವೆ.

### ಶ್ರೀ ಜಂಬುನಾಥ

ವೃತ್ತಿಯಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದು, ಇವರು ಅನೇಕ ಐತಿಹಾಸಿಕ, ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅಕ್ಷಯಾ ಅಂಬರ, ರಕ್ತದಾನ, ರಾಜವೀರ ಮದಕರಿ ನಾಯಕ, ರಕ್ತರಾತ್ರಿ, ಕುರುಕ್ಷೇತ್ರ, ದಳವಾಯಿ ಮುದ್ದಣ್ಣ, ಜೈ ಸಿದ್ಧ ನಾಯಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

### ಶ್ರೀ ಎಂ.ಕೆ. ಹರೀಶ್

ಚಿತ್ರದುರ್ಗ ನಗರದ ವಾಸಿಯಾಗಿದ್ದು, ಇವರು ತಮ್ಮ ಕಾಲೇಜು ದಿನಗಳಲ್ಲಿ ರಂಗ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಕಾಲೇಜು ಉಪನ್ಯಾಸಕರ ಜೊತೆಗೂಡಿ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಕುದುರೆಮೊಟ್ಟೆ, ಅಲ್ಲೆ ಇದ್ದೋರು, ಒಂದು ಸಾವಿನ ಸುತ್ತ, ನಾದಬ್ರಹ್ಮ ಹೀಗೆ ಅನೇಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಗೋಪಾಲ ಕೃಷ್ಣ ನಾಯರಿ, ಅಶೋಕ ಬಾದರದಿನ್ನಿ, ಸಾಂಬಶಿವ ದಳವಾಯಿ, ಎಲ್.ಕೃಷ್ಣಪ್ಪ ಮುಂತಾದ ರಂಗ ನಿರ್ದೇಶಕರಲ್ಲಿ ತರಬೇತಿ ಪಡೆದವರಾಗಿದ್ದಾರೆ. ನಟನೆಯೊಂದಿಗೆ ಗಾಯನ, ನೃತ್ಯ ಸಂಯೋಜನೆ, ಪ್ರಸಾದನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕಲ್ಲರಳಿ ಹೂವಾಗಿ, ಬಾಂಡ್ರವಿ ಮುಂತಾದ ಚಲನಚಿತ್ರದಲ್ಲಿ ಅಭಿನಯಿಸಿದ್ದಾರೆ. ವೃತ್ತಿಯಾಗಿ ಯಾವುದೇ ಕ್ಷೇತ್ರದಲ್ಲಿ ಇಲ್ಲದೇ ರಂಗಭೂಮಿಯನ್ನೇ ನಂಬಿ ಜೀವಿಸುತ್ತಿರುವ ಅಪರೂಪದ ಕಲಾವಿದರಾಗಿದ್ದಾರೆ.

### ಶ್ರೀ. ಜಿ. ಶ್ರೀನಿವಾಸಮೂರ್ತಿ

ಸಾಮಾಜಿಕ ನಾಟಕದಲ್ಲಿ ಅತ್ಯಂತ ಪ್ರಬಲವಾದ ನಟ ಹಾಗೂ ಸಂಭಾಷಣೆಯನ್ನು ಸುಲಲಿತವಾಗಿ ಹೇಳಬಲ್ಲ ನಟ. ಶ್ರೀನಿವಾಸ ಮೂರ್ತಿ ಮೊಳಕಾಲ್ಮೂರು ತಾಲ್ಲೂಕು

ಕಲಾವಿದರ ಒಕ್ಕೂಟದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡಿರುವ ರಂಗನಿರ್ದೇಶಕ. ತಂಗಿಗೆ ತಾಳಿ, ಅಣ್ಣ ತಂಗಿ ಇನ್ನೂ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ನಾಟಕ ಮತ್ತು ಚಲನಚಿತ್ರ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಟ ಪಂಕಜ್ ಅಭಿನಯಿಸಿದ ರಣ ಚಲನಚಿತ್ರ ಹಾಗೂ ಬಾಂಡ್ರವಿ ಚಲನಚಿತ್ರವನ್ನು ನಿರ್ದೇಶನ ಮಾಡಿರುತ್ತಾರೆ

## ಶ್ರೀ. ಡಿ. ಶ್ರೀಕುಮಾರ

ಡಿ. ಶ್ರೀಕುಮಾರ್ ನಗರದ ಸ್ಟೇಡಿಯಂ ಬಳಿ ವಾಸವಾಗಿದ್ದು, ಬೆಂಗಳೂರಿನ ಎಂ.ಇ.ಎಸ್, ರಂಗಶಾಲೆಯಲ್ಲಿ ರಂಗ ಶಿಕ್ಷಣ ಡಿಪ್ಲೊಮಾವನ್ನು ಪಡೆದಿದ್ದಾರೆ. ಎಸ್.ಜೆ.ಎಂ. ನಾಟಕ ಸಂಗೀತ, ನೃತ್ಯ, ಶಾಲೆಯಲ್ಲಿ ಸಂಗೀತ ಡಿಪ್ಲೊಮಾ ಪಡೆದಿದ್ದಾರೆ. ರಾಜ್ಯ ಯುವ ಪ್ರಶಸ್ತಿ ಪುರಸ್ಕೃತರಾಗಿದ್ದು ಮಿಮಿಕ್ರಿ ರಂಗ ಸಜ್ಜಿಕೆಯಲ್ಲಿ, ಮೇಕಪ್‌ನಲ್ಲಿ, ಜ್ಞಾನವಿದೆ. ಸ್ವಚ್ಛತೆ, ನೈರ್ಮಲ್ಯ ಸುಧಾರಣೆ, ಆರೋಗ್ಯ ರಕ್ಷಣೆಯ ಬಗ್ಗೆ ಹಳ್ಳಿಗಳಲ್ಲಿ ಸಂಚರಿಸಿ ಅನೇಕ ಬೀದಿನಾಟಕದ ಮೂಲಕ ಅರಿವು ಮೂಡಿಸಿದ್ದಾರೆ. ಕುದುರೆ ಮೊಟ್ಟೆ, ಊರು ಮಾರಿ, ಯುವಧರ್ಮ, ಕೋಟು, ನಾದಬ್ರಹ್ಮ, ದೀಪ, ಕಿರಗೂರಿನ ಗಯ್ಯಾಳಿಗಳು, ಪರಿಸರ, ಫೀನಿಕ್ಸ್, ಕರಿಭಂಟ, ಸಿ.ಜಿ.ಕೆ. ರೂಪಕ, ಮೊಬೈಲ್ ಮಾಯೆ, ತೇಜಸ್ವಿನಮನ, ದನಕಾಯೋರ ದೊಡ್ಡಾಟ, ಕೊತ್ವಾಲನ ಪ್ರೇಮಪ್ರಸಂಗ, ನನ್‌ಹೆಂಡ್ತಿ ಹುಡುಕಿ ಕೊಡಿ ಪ್ಲೀಸ್, ಭಾವೈಕ್ಯತೆ, ಪರಿಸರ ಪ್ರೀತಿ, ಅಲ್ಲೇ ಇದ್ದೋರು, ಗೋಕರ್ಣದಲ್ಲಿ ಗೌಡರಾನಿ, ಕುಂಟ ಕುಂಟ ಕುರವತ್ತಿ, ಅಪ್ಪ, ಸಾಕ್ರಟೀಸ್, ನೃತ್ಯ ರೂಪಕ : ರಾಧೆಕೃಷ್ಣ, ಗೋವಿನ ಹಾಡು, ಕನ್ನಡ ಜ್ಯೋತಿ ನೃತ್ಯ ರೂಪಕಗಳ ನಿರ್ದೇಶನ ಮಾಡಿದ್ದಾರೆ, ಮಕ್ಕಳ ರಂಗ ಭೂಮಿಯಲ್ಲಿ ಸಕ್ರಿಯವಾಗಿ ಮಕ್ಕಳ ರಂಗತರಬೇತಿ ಶಿಬಿರಗಳನ್ನು ನಡೆಸುತ್ತಿದ್ದಾರೆ.

## ಶ್ರೀ ಯಲ್ಲಪ್ಪ ಐಹೊಳೆ

ಮದಕರಿಪುರದ ನಿವಾಸಿಯಾಗಿದ್ದು ಇವರು ಅನೇಕ ನಾಟಕಗಳಲ್ಲಿ ಹಾಗೂ ಚಲನಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಸುಮಾರು 15 ವರ್ಷದಿಂದ ರಂಗ ಸೇವೆಯನ್ನು ನಿರಂತರವಾಗಿ ಮಾಡುತ್ತಿದ್ದು ಉತ್ತಮವಾದ ತಮಟೆ ಕಲಾವಿದರಾಗಿದ್ದಾರೆ.

## ಶ್ರೀ ಮಲ್ಲಪ್ಪನಹಳ್ಳಿ ಮಹಲಿಂಗಪ್ಪ

ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಮಲ್ಲಪ್ಪನಹಳ್ಳಿಯ ಗ್ರಾಮದವರಾಗಿದ್ದು, ಉತ್ತಮ ನಟರಾಗಿದ್ದಾರೆ. ಸತ್ತವರ ನೆರಳು ಇನ್ನೂ ಅನೇಕ ನಾಟಕದಲ್ಲಿ ಅಭಿನಯಿಸಿದ್ದಾರೆ. ಜಾಗೃತಿಯ ಬೀದಿ ನಾಟಕಗಳಲ್ಲಿ ಸಹ ಅಭಿನಯಿಸಿದ್ದಾರೆ. ಬೆಳಗಾವಿಯಲ್ಲಿ ನಡೆದ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬೀದಿ ನಾಟಕಗಳನ್ನು ನಿರ್ದೇಶಿಸಿರುತ್ತಾರೆ. ಅನೇಕ ನಾಟಕ ರಚನೆ ಮತ್ತು ನಿರ್ದೇಶನವನ್ನು ಮಾಡಿರುತ್ತಾರೆ. ಐತಿಹಾಸಿಕ, ಪೌರಾಣಿಕ ನಾಟಕದಲ್ಲಿ ಅಭಿಜಾತ ಕಲಾವಿದರಾಗಿದ್ದಾರೆ. ನಾಟಕ ನಿರ್ದೇಶನವನ್ನು ರಾಜ್ಯಾದ್ಯಂತ ಅನೇಕ ಜಿಲ್ಲೆಗಳಲ್ಲಿ

ಮಾಡಿರುತ್ತಾರೆ. ಉತ್ತಮ ನಟ, ನಿರ್ದೇಶಕರಾಗಿರುತ್ತಾರೆ. ಹಿರಿಯೂರಿನ ಭಾರತಿ ಕಲಾವಿದರು ಹಾಗೂ ಚಿತ್ರದುರ್ಗ ರಚನಾ ಹವ್ಯಾಸಿ ಕಲಾ ಸಂಘದಲ್ಲಿ ಸುಮಾರು 20 ವರ್ಷದಿಂದ ರಂಗ ಚಟುವಟಿಕೆಯಲ್ಲಿ ಭಾಗಿಯಾಗಿರುವ ಇವರಿಗೆ ಅನೇಕ ಸಂಘ ಸಂಸ್ಥೆಗಳು ಸನ್ಮಾನಿಸಿವೆ ಹಾಗೂ ಗೌರವಿಸಿದೆ.

### ಎಸ್. ಚನ್ನಬಸಪ್ಪ

1991 ರಿಂದ 1999ರವರೆಗೆ ಹವ್ಯಾಸಿ ಕಲಾವಿದನಾಗಿ 2000 ಇಸವಿಯಿಂದ ವೃತ್ತಿಪರ ಕಲಾವಿದರಾಗಿ ಮುಂದುವರಿದು 1991 ರಿಂದ 1996 ವರೆಗೆ ಚಿತ್ರದುರ್ಗದ ಎ.ಪಿ.ಎಂ.ಸಿ ಯಾರ್ಡ್‌ನ ಶ್ರಮಜೀವಿ ಕಲಾತಂಡದಿಂದ ಬಿದರಕೆರೆ ಸುಭಾನ್‌ಸಾಬ್ ನಿರ್ದೇಶನದಲ್ಲಿ ಭಕ್ತಸುಧನ್ವ, ತಾಯಿ ಕರುಳು, ವಿಧವೆಗೆ ಮತ್ತೊಂದು ಮದುವೆ, ಕಣ್ಣಾಮುಚ್ಚಾಲೆ ಮುಂತಾದ ನಾಟಕದಲ್ಲಿ ನಟನೆ ಮಾಡಿರುತ್ತಾರೆ. 1995 ರಿಂದ 1999 ರವರೆಗೆ ಸಂಗೀತ ಗುರುಗಳಾದ ಪಿ.ಗುರುರಾಜ್ ರವರ ಬಳಿ ಹಾರ್ಮೋನಿಯಂ ಅಭ್ಯಾಸ ಮಾಡುತ್ತಾ 2000 ಇಸವಿ ಯಿಂದ ಕಲೆಯಲ್ಲಿ ವೃತ್ತಿಪರ ಜೀವನ ಪ್ರಾರಂಭ ಮಾಡಿಕೊಂಡು ಸಂಗೀತ ಮತ್ತು ನಿರ್ದೇಶನದೊಂದಿಗೆ ನಟನೆಯನ್ನು ಮಾಡಲಾರಂಬಿಸಿದ್ದರು. ಚಿತ್ರದುರ್ಗ ಜಿಲ್ಲೆಯ ಕನ್ನಡ ರಾಜ್ಯೋತ್ಸವ, ಕಲಾ ಪ್ರತಿಭೋತ್ಸವದಲ್ಲಿ ಭಾಗವಹಿಸಿರುತ್ತಾರೆ ಪರಿಸರವನ್ನು ಬೆಳೆಸಿ ಕಾಪಾಡುವ ಬೀದಿ ನಾಟಕವನ್ನು ಚಿತ್ರದುರ್ಗ ಜಿಲ್ಲೆ ಹಾಗೂ ವಿವಿಧ ಜಿಲ್ಲೆಗಳ ಆಯಾ ಹಳ್ಳಿಗಳ ಶಾಲೆಗಳಲ್ಲಿ ಪ್ರದರ್ಶನ ನೀಡಿರುತ್ತಾರೆ. ದುರ್ಗೋತ್ಸವ 2006 ಸ್ಥಳ ಐತಿಹಾಸಿಕ ಕೋಟೆ ಆವರಣದಲ್ಲಿ ನಾಟಕ ಪ್ರದರ್ಶನ ನೀಡಿರುತ್ತಾರೆ ವಾರ್ತಾ ಮತ್ತು ಪ್ರಸಾರ ಮಂತ್ರಾಲಯ ಭಾರತ ಸರ್ಕಾರದ ವತಿಯಿಂದ 7 ದಿನಗಳ ಕಾಲನಡೆದ ಕರ್ನಾಟಕ ಗತವ್ಯಭವವನ್ನು ನೆನಪು ಮಾಡಿಕೊಳ್ಳುವ ಹೊನಲು ಮತ್ತು ಬೆಳಕು ನಾಟಕ ಪ್ರದರ್ಶನದಲ್ಲಿ ಭಾಗವಹಿಸುತ್ತಾರೆ. ಕಲ್ಲರಳಿ ಹೂವಾಗಿ, ಪರೋಡಿ ಮುಂತಾದ ಚಲನಚಿತ್ರದಲ್ಲಿ ಅಭಿನಯಿಸಿರುತ್ತಾರೆ

### ಶ್ರೀ ನಿಂಗಪ್ಪ

ಚಿತ್ರದುರ್ಗ ಜಿಲ್ಲೆಂಯು ಚಿತ್ರದುರ್ಗ ತಾಲ್ಲೂಕಿನ ಆಯಿತೋಳು ಗ್ರಾಮದ ಕಲಾವಿದರಾಗಿದ್ದರು. ಪ್ರೇಮಬಂಧನ, ರತ್ನ ಮಾಂಗಲ್ಯ ಮುಂತಾದ ನಾಟಕದಲ್ಲಿ ಪಾತ್ರ ಮಾಡಿರುತ್ತಾರೆ.

### ಶ್ರೀ ಓಬಣ್ಣ

ಹಿರಿಯೂರು ತಾಲ್ಲೂಕಿನ ಬೀರನಹಳ್ಳಿ ಗ್ರಾಮದವರು. ಇವರು ಅನೇಕ ನಾಟಕ ಹಾಗೂ ಬೀದಿ ನಾಟಕಗಳಲ್ಲಿ ಅಭಿನಯಿಸುತ್ತಿದ್ದಾರೆ ಹಾಗೂ ಕಿರುತೆರೆಯಲ್ಲಿ ಸಹ ಅಭಿನಯಿಸುತ್ತಿದ್ದಾರೆ.

### ಶ್ರೀ ಕೆ.ಪಿ.ಎಂ. ಗಣೇಶಯ್ಯ

ಮೂಲ ಚನ್ನಗಿರಿಯ ವಾಸಿಯಾದ ಇವರು ಚಿತ್ರದುರ್ಗದ ಶ್ರೀಬೃಹನ್ಮಠದಎಸ್.ಜೆ.ಎಂ, ನಾಟಕ ನೃತ್ಯ ಸಂಗೀತ ಶಾಲೆಯಲ್ಲಿ 1998 ರಲ್ಲಿ ರಂಗ ಅಧ್ಯಾಪಕರಾಗಿ ವೃತ್ತಿ ಆರಂಭಿಸಿ ಶ್ರೀಮಠದಲ್ಲಿ ಅನೇಕ ನಾಟಕಗಳ ರೂಪಕಗಳನ್ನು ನಿರ್ದೇಶಿಸಿರುತ್ತಾರೆ. 1993–94ನೇ ಸಾಲಿನಲ್ಲಿ ನಿನಾಸಂ ರಂಗ ಶಿಕ್ಷಣ ಡಿಪ್ಲೊಮ ಪಡೆದಿರುವ ಇವರು ಚಿತ್ರದುರ್ಗದ ಅನೇಕ ಕಾಲೇಜುಗಳಲ್ಲಿ ಸಾಂಸ್ಕೃತಿಕ ನಿರ್ದೇಶಕರಾಗಿ ಸೇವೆ ಸಲ್ಲಿಸಿರುತ್ತಾರೆ. ಬಿರುದಂತೆಂಬರ ಗಂಡ, ಮೂಕಬಲಿ, ಕಾಕನಕೋಟೆ, ಬೆಟ್ಟದ ಅರಸು ಮುಂತಾದ ನಾಟಕಗಳಲ್ಲಿ ಅಭಿನಯ ಮಾಡಿರುತ್ತಾರೆ,

### ಶ್ರೀ ಗುರುಶಾಂತಯ್ಯ ಸಿರಿಗೆರೆ

ಗುರುಶಾಂತಯ್ಯನವರು ಹಳವುದರ ಗ್ರಾಮದ ಸಿದ್ದಯ್ಯ ಹಾಗೂ ಸಿದ್ದಮ್ಮ ದಂಪತಿ ಪುತ್ರ, ಇವರು 1966 ರಲ್ಲಿ ಜನಿಸಿರುತ್ತಾರೆ. ಶಾಲಾ ದಿನಗಳಲ್ಲಿ ರಂಗಭೂಮಿ ಆಸಕ್ತಿ ಹಾಗೂ ಓದಲು ತೊಂದರೆಯಾದ ಪ್ರಯುಕ್ತ ರಂಗಭೂಮಿಯಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡು ಯಶಸ್ವಿಯಾದವರು. ಕನ್ನಡ, ತೆಲುಗು, ಹಿಂದಿ, ಇಂಗ್ಲೀಷ್, ತುಳು ಭಾಷೆಗಳ ಬಗ್ಗೆ ಮಾತನಾಡ ಬಲ್ಲವರಾಗಿದ್ದಾರೆ. ಟಿಪ್ಪುಸುಲ್ತಾನ್, ಕಿತ್ತೂರು ಚೆನ್ನಮ್ಮ, ಹರಿಶ್ಚಂದ್ರ, ಚೆನ್ನಪ್ಪ ಚೆನ್ನಗೌಡ, ಮುದುಕನ ಮದುವೆ, ಶೂರ ಚರಿತ್ರೆ, ಜಲಗಾರ ಮುಂತಾದ 100ಕ್ಕೂ ಹೆಚ್ಚು ನಾಟಕದಲ್ಲಿ ಅಭಿನಯಿಸಿದ್ದಾರೆ. ಗಾಂಧಿ, ಮಹಾಬೆಳಗು, ಬಹದ್ದೂರು, ಊರಿಲಿಂಗ ಪೆದ್ದಿ, ಸುಳ್ಳು ದೇವರಿಗೆ ಕಳ್ಳ ಪೂಜಾರಿ ಇನ್ನೂ ಮುಂತಾದ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಕೆಲವು ಕಿರುಚಿತ್ರಗಳು ಹಾಗೂ ದೇವನಹಳ್ಳಿ ಚಲನಚಿತ್ರದಲ್ಲಿ ಅಭಿನಯಿಸಿದ್ದಾರೆ. ಹಾಗೂ ಅನೇಕ ವೃತ್ತಿ ನಾಟಕ ಕಂಪನಿಗಳಲ್ಲಿ ಅಭಿನಯಿಸಿದ್ದಾರೆ. ಅವುಗಳೆಂದರೆ ಗುಬ್ಬಿ ಕಂಪನಿ, ಕೆ.ಬಿ.ಆರ್. ಡ್ರಾಮ ಕಂಪನಿ, ಹುಚ್ಚೇಶ್ವರ ನಾಟಕ ಸಂಘ, ಗುಡಿಗೇರಿ ಕಂಪನಿ, ಶಿವಸಂಚಾರ, ಹುನಗುಂದ ಕಂಪನಿಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ. ಹಾಸ್ಯ ಚಕ್ರವರ್ತಿ, ರಂಗಕುವರ ಮುಂತಾದ ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದಿದಾರೆ

### ಡಾ|| ರಾಜಶೇಖರ ಹನುಮಲಿ

ಸಿರಿಗೆರೆಯ ಎಂ.ಬಸವಯ್ಯ ವಸತಿ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಇವರು 'ಮಹಾಬೆಳಗು' ನಾಟಕದ ಕರ್ತೃ. ಈ ನಾಟಕದ ಕೇಂದ್ರ ಶಕ್ತಿಯಾದ ಶ್ರೀಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಬೆಳಗಿಸಿದ ಕಿರುದೀಪ. ಇವರು ತರಳಬಾಳು ಕಲಾ ಸಂಘದ ಸದಸ್ಯರಾಗಿ, ನಟರಾಗಿ ಕೆಲಸ ಮಾಡಿದವರು. ಶರಣಸತಿ ಲಿಂಗಪತಿ, ವಿಶ್ವಬಂಧು ಮರುಳಸಿದ್ಧ, ಮರಣವೇ ಮಹಾನವಮಿ, ತಲೆದಂಡ, ಮೃಚ್ಛಕಟಿಕ, ಜಾತ್ರೆ, ಸಾಯೋಆಟ, ಜಲಗಾರ, ಚಂದ್ರಗುಪ್ತ ಮೊದಲಾದ 30ಕ್ಕೂ ಹೆಚ್ಚು ನಾಟಕಗಳಲ್ಲಿ ಸಮರ್ಥ ಅಭಿನಯ ನೀಡಿದ್ದಾರೆ. ಇವರ ನಿರ್ದೇಶನದ ಚಂದ್ರಗುಪ್ತ, ಅಂಗುಲಿಮಾಲ, ಉರಿಲಿಂಗ ಪೆದ್ದಿ

ಮತ್ತಿತರ ನಾಟಕಗಳು ಎಲ್ಲರ ಗಮನ ಸೆಳೆದಿವೆ. ಕವಿಯಾಗಿ, ಸಂಶೋಧಕರಾಗಿ ವಿವಿಧ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಿದ್ದ ಅವರು ನಮ್ಮ ನಡುವೆ ಇಲ್ಲದಿದ್ದರೂ ಅವರ ನೆನಪು ಎಲ್ಲರ ಮನದಲ್ಲಿ ಹಸಿರಾಗಿದೆ.

### ಶ್ರೀ ಎಸ್.ಕೆ. ಪರಮೇಶ್ವರಯ್ಯ

ಶ್ರೀ ಶಿವಕುಮಾರ ಕಲಾ ಸಂಘದ ಕಾರ್ಯದರ್ಶಿ. ನಾಟಕ ಅಕಾಡೆಮಿಯ ಮಾಜಿ ಸದಸ್ಯರು. ಕಲಾ ಸಂಘದ ಹಿರಿಯ ನಟರು, ನಿರ್ದೇಶಕರು, ಸಂಘಟಕರು. ಕಲಾ ಸಂಘದ ಚಟುವಟಿಕೆಗಳ ನಿರ್ವಹಣೆ ಮಾಡುತ್ತಿದ್ದಾರೆ.

### ಶ್ರೀಪರಮಶಿವಯ್ಯ ಎ.ಜಿ.

ಹೊಸದುರ್ಗ ತಾಲ್ಲೂಕು ಆನಿವಾಳದವರಾದ ಇವರು ಓದಿದ್ದು ಎಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ. ಸುಮಾರು 29 ವರ್ಷಗಳಿಂದ ರಂಗಭೂಮಿಯಲ್ಲಿ ನಟನಾಗಿ, ಗೋಪಾಲಕೃಷ್ಣ ನಾಯರಿ, ಅಶೋಕ ಬಾದರದಿನ್ನಿ, ಸಾಂಬಶಿವ ದಳವಾಯಿ, ಎಲ್. ಕೃಷ್ಣಪ್ಪ ಮುಂತಾದವರ ರಂಗ ನಿರ್ದೇಶನದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರ, ಸಂಕ್ರಾಂತಿ, ರಾಜಾವೀರ ಮದಕರಿನಾಯಕ ಮುಂತಾದ 20 ನಾಟಕ, ಅನೇಕ ರೂಪಕಗಳಲ್ಲಿ ಅಭಿನಯಿಸಿದ್ದಾರೆ. 21 ವರ್ಷಗಳಿಂದ ಜಮುರಾ ಕಲಾಲೋಕದ ಕಲಾವಿದರಾಗಿ 15 ವರ್ಷಗಳಿಂದ ಜಮುರಾ ಕಲಾಲೋಕದ ವ್ಯವಸ್ಥಾಪರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

### ಶ್ರೀ ಶಿವಾನಂದಸ್ವಾಮಿ ಬಿ.ಎಲ್.

ಚಿಕ್ಕ ವಯಸ್ಸಿನಿಂದಲೇ ನಾಟಕದ ಗೀಳು ಹಚ್ಚಿಕೊಂಡ ಇವರು ಅಶೋಕ ಬಾದರದಿನ್ನಿ, ಕೆ.ನಾಗೇಶ್, ರಾಜೇಶ್ವರಿ, ಬಸವಲಿಂಗಯ್ಯ, ಮಂಜು ಕೊಡಗು, ಗಣಪತಿ ಹೆಗಡೆ ಮುಂತಾದ ನಿರ್ದೇಶಕರ ಜೊತೆ ಕೆಲಸ ಮಾಡಿದ್ದಾರೆ. ಪ್ರಭುಲಿಂಗ ಲೀಲೆ, ಎಚ್ಚಮನಾಯಕ, ರಾಜಾವೀರ ಮದಕರಿನಾಯಕ, ಪಾಂಡವ ವಿಜಯ, ಬೆಳಕಿನೆಡೆಗೆ, ಮ್ಯಾಕ್‌ಬತ್, ಶ್ರೀಜಗಜ್ಯೋತಿ ಬಸವೇಶ್ವರ, ನಮ್ಮೆಲ್ಲರ ಭಾರತಿ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

### ವೆಂಕಟೇಶ್ ಸಿ.ಎನ್.

ಚಿತ್ರದುರ್ಗ ತಾಲ್ಲೂಕಿನ ಮುದ್ದಾಪುರ ಗ್ರಾಮದವರಾದ ವೆಂಕಟೇಶ್ ಶಿವಸಂಚಾರ ತಿರುಗಾಟದಲ್ಲಿ ಅಂತರಂಗ ಬಹಿರಂಗ, ಮಹಾಬೆಳಗು, ಉರಿಲಿಂಗಪೆದ್ದಿ, ಕಿಂಗ್‌ಲಿಯರ್, ಶರಣಸತಿ ಲಿಂಗಪತಿ, ಮರಣವೇ ಮಹಾನವಮಿ, ವೀರಭಂಟ ಕಟ್ಟಿಚನ್ನ, ನಿಸರ್ಗವತಿ, ಸೂಳೆಸಂಕವ್ವೆ, ದೊರೆ ಈಡಿಪಸ್, ಭಾಳಬಿಕ್ಷುಕ, ಕೆರೆಗೆಹಾರ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ, ಜಮುರಾ ಕಲಾ ಲೋಕದಲ್ಲಿ ಸಾಕ್ಷರತೆ, ಪರಿಸರ ಸಂರಕ್ಷಣೆ, ದುಶ್ಚಟಗಳಿಂದ ಬಿಡುಗಡೆ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. 'ಭಾವೈಕ್ಯತೆ', 'ಕಂದಾಚಾರ',

'ನಂಬಿಕೆಡಬೇಡ', 'ಸಂಕೋಲೆ', 'ಮಹಾಮಾರಿ', 'ಬಾಳುಗೋಳು', 'ಪರಮವೀರ ಚಕ್ರ', 'ಪೌರಪ್ರಜ್ಞೆ', 'ಜನಜಾಗೃತಿ', 'ಬಸವ ಬೆಳೆ', 'ಸ್ವಾತಂತ್ರ್ಯ ಅಂದು ಮತ್ತು ಇಂದು', 'ಶರಣರು ಕಂಡ ಬಸವಣ್ಣ', 'ಶರಣ ಸಂಸ್ಕೃತಿ', 'ವಿಶ್ವಸಂದೇಶ' ವಿವಿಧ ರೂಪಕ ಮತ್ತು ಬೀದಿ ನಾಟಕಗಳಲ್ಲಿ ಅಭಿನಯ. ರಾಜ್ಯ ಹಾಗೂ ರಾಷ್ಟ್ರಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುತ್ತಾರೆ.

**ಎಚ್.ಎಸ್. ಹಾಲಪ್ಪ ನಾಯಕ**

